ಒಂದು ದಿನ ತರಗತಿಗಳು ಮುಗಿದ ಬಳಿಕ ಆಮೂರರನ್ನು ನಾಲ್ಕಾರು ಗೆಳೆಯರು ಹಿಡಿದುಕೊಂಡು ಏನೇನೋ ಚರ್ಚಿಸುತ್ತಾ ನಿಂತುಬಿಟ್ಟರು. ಅವರೋಡನೆ ಮಾತಾಡುತ್ತಾ ಆಮೂರರು ಪ್ರೊಫೆಸರರು ಕಾಯುತ್ತಿರುತ್ತಾರೆಂಬುದನ್ನು ಮರೆತು ಬಿಟ್ಟರು, ಚರ್ಚೆ ಮುಗಿದ ಬಳಿಕ ಮನೆಕಡೆ ಹೊರಟಾಗ ಪ್ರೊಫೆಸರ್‌ರ ನೆನಪಾದರೂ 'ಇಷ್ಟು ಹೊತ್ತು ಅವರೆಲ್ಲಿ ಕಾಯುತ್ತಿರಲು ಸಾಧ್ಯ? ಹೊರಟು ಹೋಗಿಬೇಕು' ಎಂದುಕೊಳ್ಳುತ್ತಾ ಮುಂದಡಿ ಇಟ್ಟು ನಡೆದು ಬಂದರೆ ಆಗೋ ಅಲ್ಲಿ–ವಿಖ್ಯಾತ ಗಣಿತ ಗುರು ಮಾಮೂಲಿನಂತೆ ಆ ಗಿಡದ ಕೆಳಗೆ ಶಿಷ್ಯನ ಬರುವಿಕೆಯನ್ನು ಕಾಯುತ್ತಾ ನಿಂತೇ ಇದ್ದರು.

ಈ ಘಟನೆ ನಡೆದದ್ದು ೧೯೫೪–೫೫ರಲ್ಲಿ. ಆ ಶಿಷ್ಯರಿಗೀಗ ಎಪ್ಪತ್ತು ಸಮೀಪಸಿದೆ. 'ಈಗಲೂ ಆ ಘಟನೆ, ಸರ್ ನನಗಾಗಿ ಅಷ್ಟು ಹೊತ್ತು ಕಾಯುತ್ತಾ ನಿಂತಿದ್ದ ಚಿತ್ರ ನೆನಪಾದರೆ ತುಂಬ ಸಂಕೋಚಗೊಳ್ಳುತ್ತೇನೆ' ಎಂದು ಪ್ರೊ. ಕೆ. ಎಸ್. ಆಮೂರ ಎದೆತುಂಬಿ ನುಡಿಯುತ್ತಾರೆ.

೨

ಪ್ರೊ. ವಿ. ಕೆ. ಆರ್. ವಿ. ರಾವ್ ಅವರು (ಇವರು ಬಳ್ಳಾರಿಯವರು) ಕೇಂದ್ರ ಶಿಕ್ಷಣ ಮಂತ್ರಿಗಳಾಗಿದ್ದಾಗೊಮ್ಮೆ ಕರ್ನಾಟಕ ವಿ. ವಿ. ಗೆ ಯಾವುದೋ ಸಮಾರಂಭಕ್ಕೆಂದು ಬಂದಿದ್ದರು. ಆಗ ಅವರು "ನಾನು ಪ್ರೊಫೆಸರ್ ಬಾಗಿ ಅವರ ಮನೆಗೆ ಹೋಗಿ ಬರಬೇಕು" ಎಂದು ಹೇಳಿ ಇವರ ಮನೆಗೆ ಬಂದು ತಮ್ಮ ಹಳೆಯ ಗುರುವನ್ನು ಮಾತನಾಡಿಸಿಕೊಂಡು ಹೋದರು.

೩

ಒಮ್ಮೆ ಪ್ರೊ. ಬಾಗಿಯವರು ತಮ್ಮ ಮನೆಗೆ ಬಂದಿದ್ದ ಸಹೋದ್ಯೋಗಿ ಪ್ರಧ್ಯಾಪಕರೊಬ್ಬರೊಂದಿಗೆ ಮಾತಾಡುತ್ತಾ ಆಡುತ್ತಾ ದನಿಎತ್ತಿ ವಾದಿಸುವುದನ್ನು ಕಂಡು ಕಿರಿಮಗ ಅಶೋಕ್‌ಗೆ ಆಶ್ಚರ್ಯವಾಯಿತು. ಗಾಬರಿಯೂ ಆಯಿತು. ಆದರೆ ಅರ್ಧಘಂಟೆಯ ನಂತರ ಇಬ್ಬರು ಪ್ರಾಧ್ಯಾಪಕರೂ ಶಾಂತರಾಗಿ ಚರ್ಚೆಯನ್ನು ಮುಂದುವರೆಸಿದ್ದು ಕಂಡು ಅವರಿಗೆ ಸಮಾಧಾನವಾಯಿತು. ಮೌಲ್ಯಗಳಿಗೆ ಸಂಬಂಧಿಸಿದಂಥ ಚರ್ಚೆಗಳು ಬಂದಾಗ ಒಮ್ಮೊಮ್ಮೆ ಬಾಗಿ ಸರ್ ಹೀಗೆ ದನಿ ಎತ್ತರಿಸುತ್ತಿದ್ದರು. ಅದು ಎದರು ಪಕ್ಷದವರನ್ನು ಬಗ್ಗಿಸಲೆಂದಲ್ಲ, ತಮ್ಮ ವಿವರಣೆಯನ್ನು ಪೂರ್ಣವಾಗಿ ಮಂಡಿಸಲೆಂದು. ಇದು ೧೯೪೦–೪೯ ರ ನಡುವಿನ ಒಂದು ಸಂದರ್ಭ.

೪

೧೯೪೭ ರ ಆಗಸ್ಟ್ ಹದಿನೈದು. ಭಾರತದ ಪ್ರಥಮ ಸ್ವತಂತ್ರ ಸುಪ್ರಭಾತದ ದಿನ. ಆ ಸಂಭ್ರಮದ ದಿನದಂದು ಕರ್ನಾಟಕ ಕಾಲೇಜಿನಲ್ಲಿ ಉತ್ಸಾಹದಿಂದ ಸ್ವಾತಂತ್ರ್ಯೋತ್ಸವದ ಏರ್ಪಾಡಾಗಿತ್ತು. ಧ್ವಜಾರೋಹಣ, ಧ್ವಜವಂದನೆ, ಉತ್ಸಾಹದ ಭಾಷಣಗಳ ನಂತರ ಮೈದಾನದಲ್ಲಿ ಕ್ರಿಡಾಚಟುವಟಿಕೆಗಳು

ಆರಂಭವಾದವು. ಅದರಲ್ಲಿ ಹಗ್ಗ ಜಗ್ಗುವ ಆಟ (Tug of war) ವೂ ಸೇರಿತ್ತು. ಹಗ್ಗದ ಒಂದು ಕಡೆ ವಿದ್ಯಾರ್ಥಿಗಳಾದರೆ ಮತ್ತೊಂದು ಕಡೆ ಅಧ್ಯಾಪಕರು. ಅಧ್ಯಾಪಕರ ಸಾಲಿನಲ್ಲಿ ಮೊದಲು ಇದ್ದವರು ಕಾಲೇಜಿನ ಪ್ರಾರ್ಯ್ಯರು. ಅವರ ನಂತರ ಇದ್ದವರೇ ಮುಂದೆ ಎರಡೇ ವರ್ಷಗಳಲ್ಲಿ ನಿವೃತ್ತಿಯಾಗಲಿದ್ದ ಪ್ರೊ. ಬಿ. ಬಿ. ಬಾಗಿಯವರು; ಪ್ರೊ. ಬಾಗಿಯವರು ಹಾಗೆ ಕಾಣಸಿಗುತ್ತಿದ್ದುದ್ದೇ ತುಂಬ ಅಪರೂಪ 'ಅದನ್ನು ನೋಡಿದ ಎಲ್ಲರಿಗೂ ಖುಷಿಯೋ ಖುಷಿ, –ಎಂದು ಆ ವರ್ಷ ಆ ಕಾಲೇಜಿಗೆ ಇಂಟರ್‌ಮಿಡಿಯಟ್ ವಿದ್ಯಾರ್ಥಿಯಾಗಿ ಸೇರಿದ್ದ ಬಿ. ಬಿ. ಕಣವಿಯವರು ನೆನಪು ಮಾಡಿಕೊಳ್ಳುತ್ತಾರೆ.

೫

ಬಿ. ಬಿ. ಕಣವಿಯವರು ಇಂಟ್‌ಮಿಡಿಯಟ್ ತರಗತಿಯಲ್ಲಿ ಗಣಿತವನ್ನು ಐಚ್ಛಿಕವಾಗಿ ತೆಗೆದುಕೊಂಡು ಪ್ರೊ. ಬಾಗಿಯವರು ವಿದ್ಯಾರ್ಥಿಯಾಗಿದ್ದವರು. ಮುಂದೆ ಅವರು ಅರ್ಥಶಾಸ್ತ್ರವನ್ನು ಪ್ರಧಾನವಿಷಯವಾಗಿ ತೆಗೆದುಕೊಂಡು ಬಿ. ಎ. ಎಂ. ಎ. ಗಳನ್ನು ಮುಗಿಸಿ ಕರ್ನಾಟಕ ಕಾಲೇಜಿನಲ್ಲಿ ಉಪನ್ಯಾಸಕರಾಗಿ ಕ್ರಮೇಣ ಪ್ರಾಧ್ಯಾಪಕರಾದರು. (ಇವರ ಇಂಟರ್ ಮುಗಿಯುತ್ತಿದ್ದಂತೆ ಬಾಗಿ ಸರ್ ನಿವೃತ್ತರಾದರು) ಮುಂದೆ ಮರ್ನಾಟಕ ಕಿಲೇಜು ಕಲಾ ಕಾಲೇಜು ಹಾಗೂ ವಿಜ್ಞಾನ ಕಾಲೇಜುಗಳೆಂದು ಪ್ರತ್ಯೇಕಗೊಂಡೆ ಮೇಲೆ ಪ್ರೊ. ಬಿ.ಬಿ. ಕಣವಿಯವರು ಕರ್ನಾಟಕ ಕಲಾ ಕಾಲೇಜಿನ ಪ್ರಾಚಾರ್ಯರು ಪ್ರೊ. ಆರ್ಮಾಂಡೋ ಮೆನೆಝಿಸ್) ಹಾಗೆ ಬಹಳ ವರ್ಷ ಪ್ರಾಚಾರ್ಯರಾಗಿದ್ದ ಪ್ರೊ. ಕಣವಿಯವರು ಪ್ರಾಚಾರ್ಯರಿಗಾಗಿ ಮಿಸಲಾಗಿದ್ದ ಕಾಲೇಜು ಅವರಣದಲ್ಲಿನ ಬಂಗಲೆಯಲ್ಲಿ ವಾಸಿಸುತ್ತಿದ್ದರು. ಆಗೊಮ್ಮೆ ಏನಾಯಿತೆಂಬುದುನ್ನು ಅವರ ಬಾಯಿಂದಲೇ ಕೇಳಬೇಕು:

" . . . .ಒಂದು ದಿನ ಮುಂಜಾನೆ ಅಚಾನಕಾಗಿ ಪ್ರೊ. ಬಾಗಿಯವರು ಅಲ್ಲಿಗೆ ಬಂದರು. 'ಬನ್ನಿ ಸರ್, ನಮಸ್ಕಾರ' ಎಂದೆ. ಕುಳಿತುಕೊಂಡರು. ಚಹ ಕುಡಿಯುತ್ತ ಕೆಲಹೊತ್ತು ತಮ್ಮ ಹಳೆಯ ನೆನಪುಗಳನ್ನು ಹೇಳುತ್ತ, 'ಪ್ರಿನ್ಸಿಪಾಲ ಕಣವಿಯವರೇ, ನೀವು ಗಣಿತ ವಿಷಯವನ್ನು ತೆಗೆದುಕೊಂಡು ನನ್ನ ವಿದ್ಯಾರ್ಥಿಯಾಗಿದ್ದಿರಲಾವೇ?' ಎಂದು ಕೇಳಿದಾಗ ನನಗೆ ಸೋಜಿಗವೂ, ಸಂತೋಷವೂ ಆಯಿತು. 'ಸರ್, ನಾನು ಆ ಮಾತನ್ನು ನಿಮಗೆ ಹೇಳಬೇಕೆನ್ನುವಷ್ಟರಲ್ಲಿಯೇ ನೀವೇ ಹೇಳಿಬಿಟ್ಟಿರಲ್ಲಾ' ಎಂದೆ. ಅವರಿಗೂ ಬಹಳ ಸಂತೋಷವಾಯಿತು. ನಂತರ ಯಾವಾಗಲಾದರೂ ಒಮ್ಮೊಮ್ಮೆ ನಮ್ಮ ಮನೆಗೆ ಬಂದು ಕಾಲೇಜಿನ ಪ್ರಗತಿಯ ಬಗ್ಗೆ ವಿಚಾರಿಸಿಕೊಂಡು ಹೋಗುತ್ತಿದ್ದರು."

ಎರಡೇ ವರ್ಷ ತಮ್ಮ ವಿದ್ಯಾರ್ಥಿಯಾಗಿದ್ದ (ಅದೂ ತಮ್ಮ ನಿವೃತ್ತಿಯ ದಿನಗಳಲ್ಲಿ) ವ್ಯಕ್ತಿಯನ್ನು ಇಪ್ಪತ್ತು ವರ್ಷಗಳ ನಂತರವೂ ಗುರುತಿಸಿ ಕೇಳಿದ್ದು, ಅವರು ಹಾಗೆ ಗುರುತಿಟ್ಟುಕೊಂಡಿದ್ದೇ ತಮ್ಮ ಸುದೈವವೆಂಬಂಥ ಭಾವನೆ ಪ್ರಾಚಾರ್ಯನಾಗಿದ್ದ ಆ ವಿದ್ಯಾರ್ಥಿಯಲ್ಲಿ ಬರುವಂಥ ರೀತಿಯಲ್ಲಿ ಈ ಗುರುವಿನ ನಡವಳಿಕೆ ಇದ್ದದ್ದು, ನಿವೃತ್ತಿಯಾದ ಅಷ್ಟು ವರ್ಷಗಳ ನಂತರವೂ ತಾವು ಕೆಲಸ ಮಾಡಿದ ಕಾಲೇಜಿನ ಬಗ್ಗೆ ಅವರು ಇಟ್ಟುಕೊಂಡಿದ್ದ ಅಭಿಮಾನ–ಇವೆಲ್ಲ ಈ ಒಂದೇ ಒಂದು ಪ್ರಸಂಗದಿಂದ ವಿದಿತವಾಗುತ್ತವೆ.

ಅಶೋಕ ನಾಲ್ಕನೇ ಇಯತ್ತೆಯಲ್ಲಿದ್ದಾಗ ಅವನಿಗೆ ಪಾಠ ಹೇಳಲು ಮನೆಗೆ ಒಬ್ಬ ಮಾಸ್ತರು ಬಂದು ಹೋಗುವ ವ್ಯವಸ್ಥೆ ಮಾಡಿದ್ದರು. ತುಂಬ ಕಡಿಮೆ ಕಲಿತಿದ್ದ ತಮ್ಮ ಪತ್ನಿಯೂ ಅವನೊಂದಿಗೆ ಒಂದಷ್ಟು ಕಲಿಯಲಿ ಎಂದರು ಪ್ರೊಫೆಸರರು. ಕೆಲ ದಿನ ಕುಳಿತು ಪ್ರಯತ್ನಿಸಿದ ಕುಸುಮಕ್ಕನ ತಲೆಗೆ ಅದು ಹತ್ತದೆ ಕೈಬಿಟ್ಟರು. ಆಗ ಪ್ರೊಫೆಸರ್ ಸಾಹೇಬರು ತಮ್ಮ ಪತ್ನಿಯ ಬಗ್ಗೆ ನಗುತ್ತಾ ಹೇಳತೊಡಗಿದರು– "ಈ ಕಲ್ಲು ಎಷ್ಟು ಬಿರುಸು ಅದ ಅಂದರ ಇದರ ಮ್ಯಾಲ 'ಅ' ಸ್ಯೆತ ಮೂಡಂಗಿಲ್ಲ".

೭

ಪ್ರೊ. ಬಾಗಿಯವರ ಮಗಳು ಸುಧಾ ಪದವೀಧರಳಾಗುವ ವೇಳೆಗೆ ಆಕೆಯನ್ನು ಚಿಕ್ಕಂದಿನಿಂದ ನೋಡಿದ್ದ ಲೇಖಕಿ ಶ್ರೀಮತಿ ಶಾಂತಾದೇವಿ ಮಾಳವಾಡ ಅವರು ಧಾರವಾಡ ಮಹೀಳಾ ಮಂಡಳದ ಅಧ್ಯಕ್ಷರಾಗಿದ್ದರು. ಮಂಡಳದ ಕಾರ್ಯಚಟುವಟಿಕೆಗಳಿಗೆ ಹಣ ಕೂಡಿಸುವ ಅಧ್ಯಕ್ಷರಾಗಿದ್ದರು. ಮತ್ತು ದಿವಂಗತ ಕಾದಂಬರಿಕಾರ್ತಿ ಶ್ರೀಮತಿ ಗೀತಾ ಕುಲಕರ್ಣಿ (ಇವರು ದಿ. ಶಿವರಾಮ ಕಾರಂತರ ನಾದಿನಿ) ಇಬ್ಬರೂ ಕೂಡಿ ವಿವಿಧ ವಿನೋದಾವಳಿ ಕಾರ್ಯಕ್ರಮವೊಂದನ್ನು ಯೋಚಿಸಿದರು. ಕರಂತರ ಪ್ರಖ್ಯಾತ ಗೀತರೂಪಕ 'ಕಿಸಾಗೋತಮಿ' ಯನ್ನು ನಿರ್ದೇಶಿಸಿ ಪ್ರದರ್ಶಿಸಲು ಗೀತಾ ಇಷ್ಟಿಕೊಂಡರು. ಬುದ್ಧನ ಪಾತ್ರಕ್ಕೆ ತಕ್ಕವರು ಎಷ್ಟು ಹುಡುಕಿದಿರೂ ಇವರಿಗೆ ಸಿಗಲಿಲ್ಲ. ಬಹಳ ವಿಚಾರ ಮಾಡಿದ ನಂತರ ಸುಧಾ ಆ ಪಾತ್ರಕ್ಕೆ ಸರಿಯಾಗುತ್ತಾಳೆ ಎಂದೆನ್ನಿಸಿತು ಸಂಪ್ರದಾಯಶೀಲರಾದ ಬಾಗಿಯವರು ಇದಕ್ಕೆ ಇಪ್ಪುತ್ತಾರೆಯೋ ಇಲ್ಲವೋ ವ್ಯ್ಬ ಅಳುಕಿನಿಂದಲೇ ಇಬ್ಬರೂ ಹೋಗಿ ಅವರನ್ನು ಕೇಳಿದರು. ಬುದ್ಧನ ಹೆಸರು ಹೇಳುತ್ತಲೇ ಪ್ರೊ. ಬಾಗಿಯವರು ಸಂತಸದಿಂದ ಒಪ್ಪಿಕೊಂಡರು. ಅನಂತರ ಸುಧಾಳನ್ನು ಇಷ್ಟಿಸಿದ್ದಾಯ್ತು. ರಂಗದ ಮೇಲೆ ಅಭಿನಯಿಸಿದ ಅನುಭವ ಇಲ್ಲದಿದ್ದರೂ ನಾಲ್ಕೇ ಮಾತುಗಳನ್ನು ಅಡುವಂಥ ಪಾತ್ರವಾದ್ದರಿಂದ ಇವರಿಬ್ಬರೂ ಕೊಟ್ಟ ಧೈರ್ಯದ ಮೇಲೆ ಒಪ್ಪಿಕೊಂಡಳು.

ಪ್ರದರ್ಶನ ಯಶಸ್ವಿಯಾದದ್ದನ್ನು ಶಾಂತಕ್ಕ ಅಭಿಮಾನದಿಂದ ನೆನಸಿಕೊಳ್ಳುತ್ತಾರೆ– "ಬುದ್ಧನ ಪಾತ್ರಕ್ಕೆ ಹೇಳಿ ಮಾಡಿಸಿದಂತಿದ್ದ ಸುಧಾಳ ಎತ್ತರದ ನಿಲುವು, ನಿಲುವಿಗೆ ತಕ್ಕ ದಷ್ಟಪುಷ್ಟ ಶರೀರ, ದುಂಡುಮುಖ, ವಿಶಾಲವಾದ ಹಣೆ, ಮಿಂಚುವ ಕಣ್ಣುಗಳು, ಗುಂಗುರು ಕೂದಲು; ತಲೆಯ ಮೇಲೆ ಕೂದಲನ್ನು ವೃತ್ತಾಕಾರವಾಗಿ ಕಟ್ಟಲಾಗಿತ್ತು. ಕೇಸರಿ ಬಣ್ಣದ ಧೋತರ ಉಟ್ಟು, ಕೇಸರಿ ಸೆಲ್ಲೆ ಹೊದ್ದು ಕುಳಿತ ಸುಧಾ ಸಾಕ್ಷಾತ್ ಬುದ್ಧನೇ ಕುಳಿತಂತಿದ್ದಳು. ಕಿಸಾಗೋತಮಿ ನೋಡಿದ ಧಾರವಾಡದ ಜನ ಇಂದಿಗೂ ಆ ಸವಿ ನೆನಪನ್ನು ನೆನೆಯುತ್ತಾರೆ. ಬಾಗಿಯವರು ನಾವು ಮಾಡಿಸಿದ ಆ ಗೀತರೂಪಕ ನೋಡಿ, ಮಗಳನ್ನು ಬುದ್ಧನ ರೂಪದಲ್ಲಿ ಕಂಡು ಬಹಳ ಸಂತೋಷಪಟ್ಟರು. ಬಾಗಿಯವರು ಸಂಪ್ರದಾಯಶೀಲರಾದರೂ ಒಳ್ಳೆಯ ಉದ್ದೇಶವಿದ್ದಲ್ಲಿ ಹೊಸದಕ್ಕೆ ಹೊಂದಿಕೊಳ್ಳುತ್ತಿದ್ದರು."

೮

ಕರ್ನಾಟಕ ಕಾಲೇಜಿನ ಬ್ಲಾಕ್‌ನ ಹೊಸಕಟ್ಟಡದ ಉದ್ಘಾಟನೆಯ ಸಂದರ್ಭ. ಮುಂಬಯಿ ರಾಜ್ಯದ ಗವರ್ನರ್ ಆಥಿದ್ದ ಮಹಾರಾಜ ಸಿಂಗ್ ಅವರು ಅದಕ್ಕಾಗಿ ಆಗಮಿಸಿದ್ದರು. ಅದೇ ಸಂದರ್ಭದಲ್ಲಿ ಗಾಂಧೀಜಿ

ತತ್ವಾನುಯಾಯಿಯಾಗಿದ್ದ ಪ್ರೊ.ಬಿ.ಬಿ ಬಾಗಿಯವರು ಗಾಂಧೀಜಿಯವರ ಆಳೆತ್ತರದ ತೈಲಚಿತ್ರವನ್ನು ಬರೆಸಿ ಕಾಲೇಜಿಗೆ ಕೊಡುಗೆಯಾಗಿ ನೀಡಿದ್ದರು. ಆ ಚಿತ್ರದ ಅನವರಣವೂ ಆಗಬೇಕಿತ್ತು. ಚಿತ್ರವನ್ನು ಅನಾವರಣಗೊಳಿಸಿದ ರಾಜ್ಯಪಾಲರು ಅದರ ಉತ್ಕೃಷ್ಟತೆಗೆ ಮಾರು ಹೋದರು. ಸಭಾಸದರತ್ತ ತಿರುಗಿ– 'ಯಾರು ಇದನ್ನು ನೀಡಿದ್ದು?' ಎಂದು ಕೇಳಿದರು. ಪ್ರೇಕ್ಷಕರ ಜೊತೆ ಕುಳಿತಿದ್ದ ಪ್ರೊ. ಬಾಗಿಯವರು ಎದ್ದು ನಿಂತು ನಮಸ್ಕರಿಸಿದರು. ವೇದಿಕೆಗೆ ಬರುವಂತೆ ಅವರನ್ನು ಮಹಾರಾಜರು ಕರೆದರು. ಸಂಕೋಚದಿಂದಲೇ ಬಾಗಿಯವರು ವೇದಿಕೆಗೆ ನಡೆದು ಹತ್ತಿರ ಹೋಗುತ್ತಲೇ ಮಹಾರಜರು ಅವರನ್ನು ಸಂತೋಷದಿಂದ ಅಪ್ಪಿಕೊಂಡು ಬಿಟ್ಟರು. ಇಡೀ ಸಭೆ ಮೂಕವಿಸ್ಮಿತವಾಯಿತು.

೯

ಗಾಂಧೀಜಿಯ ಹತ್ಯೆ ದೇಶದ ಕೋಟ್ಯಾನುಕೋಟಿ ಜನಗಳ ಮೇಲೆ ದುಃಖದ ಛಾಯೆ ಕವಿಸಿದ್ದಂತೆ ಪ್ರೊ. ಬಾಗಿಯವರನ್ನೂ ದುಃಖಿತರನ್ನಾಗಿ ಮಾಡಿತ್ತು. ಅವರ ಚಿತಾಭಸ್ಮವನ್ನು ಹರಿಹರದ ತುಂಗಭದ್ರಾ ನದಿಯಲ್ಲಿ ವಿಸರ್ಜಿಸುವ ಸಂದರ್ಭದಲ್ಲಿ ಅವರು ಪತ್ನಿಯೊಡನೆ ಅಲ್ಲಿಗೆ ಹೋಗಿ ಆ ಕಾರ್ಯಕ್ರಮಕ್ಕೆ ಹಾಜರಾದರು. ಅಹಿಂಸೆ, ಅಪರಿಗ್ರಹಗಳನ್ನು ರಾಷ್ಟ್ರಜೀವನಕ್ಕೂ ಅನ್ವಯಿಸಲು ಜೀವಮಾನವಿಡೀ ಹೆಣಗಿ ಹುತಾತ್ಮನಾದ ಸಹಸ್ರಮಾನದ ಶ್ರೇಷ್ಠ ಜೀವವೊಂದಕ್ಕೆ ತಮ್ಮ ಅಶ್ರುತರ್ಪಣವನ್ನು ಸಲ್ಲಿಸಿ ಬಂದರು.

೧೦

ಅವರು ಮುಂದೆ ನಿಂತು ಕಟ್ಟಿಸಿದ ಧಾರವಾಡದ 'ಸನ್ಮತಿ ಜೈನ ವಿದ್ಯಾರ್ಥಿ ನಿಲಯ'ದ ಹಳೆಯ ವಿದ್ಯಾರ್ಥಿಯೊಬ್ಬ ಅನ್ಯಜಾತಿಯ ಹುಡುಗಿಯನ್ನು ಮದುವೆಯಾಗುತ್ತಾನೆಂಬ ಸುದ್ಧಿ ಕಿವಿಗೆ ಬಿದ್ದಾಗ ಸಂಪ್ರದಾಯಶೀಲರೂ ಜೈನಧರ್ಮವನ್ನು ಕಾಯಾವಾಚಾ ಮನಸಾ ಆಚರಿಸುತ್ತಿದ್ದ ಇಳಿವಯಸ್ಸಿನ ಪ್ರೊ. ಬಾಗಿಯವರ ಪ್ರತಿಕ್ರಿಯೆ ತುಂಬ ಸಂಯಮಶೀಲವೂ ಉದರವೂ ಆದುದಾಗಿತ್ತು. ಅವರಂದದ್ದು ಇಷ್ಟೇ– "ಹುಡುಗಿ ಸಸ್ಯಾಹಾರಿಯಾಗಿದ್ದು ಸುಸಂಸ್ಕೃತ ಮನೆತನದವಳಿರಬೇಕು. ಅವಳು ಸುಂದರಳೂ ಆಗಿದ್ದರೆ ಇನ್ನೂ ಒಳ್ಳೆಯದೇ . **One more beautiful girl to our community".**

೧೧

ಅವರು ನಿವೃತ್ತರಾದ ಕೆಲವು ವರ್ಷಗಳ ನಂತರ ನಡೆದ ಘಟನೆಯಿದು. ತಮ್ಮ ಗದ್ದೆಯಲ್ಲಿ ಕಬ್ಬು ಬೆಳೆಯಲು ಬೇಕಾದ ಬೀಜ ತರಲು ಒಮ್ಮೆ ಅವರು ಕೆಲಗೇರಿಗೆ ಸೈಕಲ್ಲಿನಲ್ಲಿ ಹೋಗುತ್ತಿದ್ದಾಗ ಬಿದ್ದುಬಿಟ್ಟರು. ಪ್ರಜ್ಞೆ ತಪ್ಪಿತು. ರಸ್ತೆ ಪಕ್ಕದಲ್ಲೇ ನಾಲ್ಕೈದು ತಾಸು ಬಿದ್ದಿದ್ದರು. ಯಾರೋ ನೋಡಿ ಗುರುತು ಹಿಡಿದು ಅವರ ಜಮಿನಿನವರೆಗೆ ಸಗಿಸಿ ತಂದು ಅಲ್ಲಿದ್ದ ಪುಟ್ಟ ಮನೆಯಲ್ಲಿ ಇರಿಸಿ ಕುಟುಂಬಕ್ಕೆ ಸುದ್ದಿಕೊಟ್ಟರು. ಪತ್ನಿ, ಮಗ ಅಶೋಕ ಟಾಂಗಾ ಮಾಡಿಕೊಂಡು ಅಲ್ಲಿಗೆ ಹೋಗಿ ಅವರನ್ನು ಮನೆಗೆ ಕರೆತಂದರು. ನಡೆಯಲಾಗುತ್ತಿರಲಿಲ್ಲ. ಕುರ್ಚಿಯಲ್ಲಿ ಕೂರಿಸಿ ಎಳೆತಂದರು. ಅವರಿಗೆ ಪುನಃ ಪ್ರಜ್ಞೆ ತಪ್ಪಿತು. ನೀರು ತಟ್ಟಿದಾಗ ಎಚ್ಚರಾಯಿತು. ಅನಂತರ ವೈದ್ಯರಿಂದ ತಪಾಸಣೆ, ಶುಷ್ರೂಷೆಗಳೆಲ್ಲ ನಡೆದವೆನ್ನಿ.

ಆ ವರ್ಷ ಅವರು ಕಬ್ಬು ಬೆಳೆಯಲಾಗಲಿಲ್ಲ. ಅಲ್ಲಿಂದ ಮುಂದೆ ಅವರು ಸೈಕಲ್ಲನ್ನೂ ತುಳಿಯಲಿಲ್ಲ.

೧೨

ಸ್ನೇಹಪೂರ್ವಕವಾಗಿ ಚರ್ಚಿಸುವುದು ಪ್ರೊ. ಬಾಗಿಯವರಿಗೆ ತುಂಬ, ತುಂಬ ಇಷ್ಟವಾದ ಸಂಗತಿಯಾಗಿತ್ತು. ಮಾಳವಾಡ ಶಾಂತಕ್ಕ ಮತ್ತು ಇವರ ನಡುವೆ ಒಮ್ಮೆ ನಡೆದ ಚರ್ಚೆ ಹೀಗಿತ್ತು.

ಪ್ರೊ. ಬಾಗಿ : ಶಾಂತಕ್ಕ, ನೀವು ಲಿಂಗಾಯತರೆಲ್ಲ ಮೊದಲು ಜೈನರ ಆಗಿದ್ದಿರಿ. ಬಸವಣ್ಣ ಲಿಂಗ ಕಟ್ಟಿದ ಮ್ಯಾಲ ಲಿಂಗಾಯಿತರಾದಿರಿ.

ಶಾಂತಕ್ಕ : ಇರಬಹುದು; ವೀರಶೈವರು, ಜೈನರ ಊಟ ಒಂದೇ ಬಗೆಯಾಗಿದೆ. ಬಸವಣ್ಣ ಸಾಮಾಜಿಕ ಧಾರ್ಮಿಕ ಕ್ಷೇತ್ರದಲ್ಲಿ ಸ್ತ್ರೀ–ಪುರುಷರಿಗೆ ಸಮಾನ ಅವಕಾಶ ಕಲ್ಪಿಸಿದ್ದಾನೆ. ಆದರೆ ಜೈನರಲ್ಲಿ ಮಹಿಳೆಯರು ದೀಕ್ಷೆ ಪಡೆಯ ಬಹುದು. ನೋಂಪಿ ಅಚರಿಸಬಹುದು. ಆರ್ಯಿಕೆಯರಾಗಬಹುದು. ಸಲ್ಲೇಖನ ವ್ರತ ಸ್ವೀಕರಿಸುವ ಮಹಿಳೆಯರನ್ನು ಇಂದಿಗೂ ಕಾಣಬಹುದು. ಸಲ್ಲೇಖನ ವ್ರತಧಾರಿಗಳಾಗಿ ಆತ್ಮಾರ್ಪಣಗೈದವರ ಬಗ್ಗೆ ಕರ್ನಾಟಕದಲ್ಲಿ ಶಿಲಾಶಾಸನಗಳದಾವ.

ಪ್ರೊ. ಬಾಗಿ : ಹೌದು, ದಾನಧರ್ಮದಲ್ಲಿ, ಜಿನಮಂದಿರ ಕಟ್ಟಿಸಿದವರಲ್ಲಿ ಸಕಷ್ಟು ಜೈನ ಮಹಿಳೆಯರ ಉದಾಹರಣೆಗಳದಾವ. ಅತ್ತಿಮಬ್ಬೆಯಂಥ ದಾನ ಚಿಂತಾಮಣಿಯರು ಆಗಿ ಹೋಗ್ಯಾರ.

ಶಾಂತಕ್ಕ : ಅದೆಲ್ಲ ನಿಜ. ಆದರೆ ಮೋಕ್ಷ ಪಡೀಬೇಕಾದ್ರ ಮಹಿಳೆ ಪುರುಷ ಜನ್ಮ ತಳೆದು ಮೋಕ್ಷ ಪಡೀಬೇಕು ಎಂದದ ಜೈನರೊಳಗ. ವೀರಶೈವರಾದ ಮಹಿಳೆ ಶಿವಯೋಗ ಸಾಧನೆಯಿಂದ ಶಿವಸಾಯುಜ್ಯ ಪಡೀಬಹುದು.

ಪ್ರೊ. ಬಾಗಿ : ಜೈನರಾಗ ಮೋಕ್ಷಸಂಪಾದನೆ ಮಾಡ್ಕೋಳ್ಳಿಕ್ಕ ದಿಗಂಬರ ಮುನಿ ಆಗಬೇಕು. ಹಾಗಿದ್ಕೊಂಡು ಚಳಿಮಳೆ, ಬಿಸಿಲು ತಡಕೊಂಡು ಒಂದೇ ಕಡಿ ನಿಲ್ಲದ ಊರೂರು ತಿರುಗೂದು ಮಹಿಳೆಗೆ ಕಠಿಣ. ಆದ್ದರಿಂದಲೇ ಪುರುಷಜನ್ಮ ಪಡೀಬೇಕಂತ ಹೇಳ್ಯಾದ. ಮೊದಲು ಸ್ತ್ರೀಯರಿಗಿದ್ದ ಶೂದ್ರಸ್ಥಾನವನ್ನು ತೀರ್ಥಂಕರರು ಹೋಗಲಾಡಿಸ್ಯಾರ.

ಶಾಂತಕ್ಕ : ನೀವು ಹೇಳೂದು ಖರೆ. ಜೈನರಲ್ಲಿ ದೇಹದಂಡನೆಗೆ ಅಂದರೆ ಉಪವಾಸ ಮೊದಲಾದ ವ್ರತನಿಯಮಗಳಿಗೆ ಮಹತ್ವ ಕೊಟ್ಟಾರ. ವೀರಶೈವರಲ್ಲಿ ಸತ್ಯಶುದ್ಧ ಕಾಯಕ ಮಾಡಿ ಗುರುಲಿಂಗ ಜಂಗಮರಿಗೆ ದಾಸೋಹ ನಡೆಸಿ ಮಾಡಿದ ಅಡಿಗೆಯನ್ನು ಶಿವಾರ್ಷಿತಗೊಳಿಸಿದರೆ ಅದು ಪ್ರಸಾದವಾಗುತ್ತದೆ. ಅಂಥ ಪ್ರಸಾದದಿಂದ ಮೋಕ್ಷ ಮಾರ್ಗ ಸುಲಭ ಎಂದದ.

ಪ್ರೊ. ಬಾಗಿ : (ನಗುತ್ತ) ತತ್ವದಲ್ಲಿ ಹೆಚ್ಚು ಕಡಿಮೆ ಇದ್ರೂ ಮೂಲದಲ್ಲಿ ನವೆಲ್ಲ ಒಂದೇ.

ಹೀಗೆ ಮಾತು ಮುಗಿದಿತ್ತು.

ಪ್ರೊ. ಸ. ಸ. ಮಾಳವಾಡ ಅವರು ತಮ್ಮ ಆತ್ಮಕತೆ 'ದಾರಿ ಸಾಗಿದೆ' ಯಲ್ಲಿ ತಾವು ಉಪನ್ಯಾಸಕರಾಗಿ ಕರ್ನಾಟಕ ಕಾಲೇಜಿಗೆ ಸೇರಿದ ಸನ್ನಿವೇಶ, ಆಗ ಪ್ರೊ. ಬಾಗಿಯವರು ತಮ್ಮನ್ನು ಕಂಡ ರೀತಿಯನ್ನು ಹೀಗೆ ದಾಖಲಿಸಿದ್ದಾರೆ:

"ವಿದ್ಯಾರ್ಥಿಯಾಗಿದ್ದಾಗ ನನಗೆ ಪರಿಚಿತರಾಗಿದ್ದ ಕೆಲವು ಪ್ರೊಫೆಸರರು ಕಾಲೇಜಿನಲ್ಲಿ ನನ್ನನ್ನು ಆತ್ಮೀಯತೆಯಿಂದ ಸ್ವಾಗತಿಸಿದರು. ಸ್ಥಳೀಕ ಮುಂದುವರೆದ ಸಮಾಜದ ಪೂರ್ವಗ್ರಹವಿಲ್ಲದ ಪ್ರೊ|ಪತ್ರಾವಳಿ, ಪ್ರೊ| ಬಾಗಿ, ಪ್ರೊ. ಬಾಗಿ ಅವರು ತಾವು ವಾಸಿಸುತ್ತಿದ್ದ ಓಣಿಯಲ್ಲಿ ನನಗಾಗಿ ಮನೆ ನೋಡಬೇಕೆಂದು ಪ್ರಯತ್ನಿಸಿದರು. " (ದಾರಿ ಸಾಗಿದೆ. ಪು. ೧೯೩)

ಕೇಳದಿದ್ದರೂ ಸಹಾಯ ಮಾಡಲು ಮುನ್ನುಗ್ಗುವ ಪ್ರೊ. ಬಾಗಿಯವರ ಸ್ವಭಾವಕ್ಕೆ ಇದೊಂದು ನಿದರ್ಶನ. ಎರಡು ವರ್ಷಗಳ ನಂತರ ಅವರಿಗೆ ಅದೇ ಓಣಿಯಲ್ಲಿಯೇ ಮನೆ ಸಿಕ್ಕಿತು.

೧೪

ಪ್ರೊ. ಬಾಗಿಯವರಿಗೆ, ಅವರಿಗಿಂತ ಹತ್ತು ವರ್ಷ ಕಿರಿಯನಾಗಿದ್ದ ತಮ್ಮನೊಬ್ಬನಿದ್ದ. ಅನಂತ ಎಂದು ಅವನ ಹೆಸರು. ಒಂದಷ್ಟು ಶಾಲೆ ಓದಿದ ಬಳಿಕ ಅವನು ಓದುವುದು ಬೇಡವೆಂದು ತಂದೆ ಹೇಳಿದರು. ಓದಲೇಬೇಕೆಂದು ಹಟಮಾಡಿ ಮನೆಯಲ್ಲಿ ಜಗಳವಾಡಿದ ಅನಂತ ಮನೆಬಿಟ್ಟು ಧಾರವಾಡಕ್ಕೆ ಅಣ್ಣನ ಬಳಿಗೆ ಬಂದ. ಅವನಿಗೆ ಓದಲು ಹುರಿದುಂಬಿಸಿ ಬಳಿಯಲ್ಲಿಟ್ಟುಕೊಂಡು ಓದಿಸಿದರು. ಮುಂದೆ ಅನಂತ ಬಾಗಿ ಕೊಲ್ಲಾಪುರಕ್ಕೆ ಹೋಗಿ ಕಾನೂನು ಪದವಿ ಮುಗಿಸಿದರು. ಗೋಕಾಕದಲ್ಲಿ ಹನ್ನೆರಡು ವರ್ಷಗಳ ಕಾಲ ಪ್ಲೀಡರ್ ಆಗಿದ್ದರು. ಆಗ ಅವರಿಗೆ ಸಿವಿಲ್ ಜಡ್ಜ್ ಎಂದು ನೇಮಕಾತಿಯಾಯಿತು. ಮುಂದೆ –ಹಾವೇರಿ, ಮುದ್ದೇಬಿಹಾಳ, ಸೊಲ್ಲಾಪುರಗಳಲ್ಲಿ ಕೆಲಸ ಮಾಡಿದ ಶ್ರೀ ಅನಂತಬಾಗಿ ಕೊನೆಗೆ ಪುಣೆಯಲ್ಲಿದ್ದಾಗ ನಿವೃತ್ತಿಪಡೆದರು. ತನ್ನ ಉನ್ನತಿಗೆ ಬೆನ್ನುಲುಬಾಗಿ ನಿಂತ ಅಣ್ಣನನ್ನೇ ತಂದೆ ಎಂದು ತಿಳಿದಿದ್ದರವರು !

೧೫

ಎಲ್ಲವು ಶಿಸ್ತುಬದ್ಧವಗಿ ಯೋಜಿತ ರೀತಿಯಲ್ಲಿ ನಡೆಯಬೇಕೆಂಬುದು ಪ್ರೊ. ಬಾಗಿಯವರ ಇಚ್ಛೆ. ಮನೆಯಲ್ಲಿ ಏನು ಕಾರ್ಯಕ್ರಮ, ಆಗುಹೋಗುಗಳಿದ್ದರೂ ತಮ್ಮ ಗಮನಕ್ಕೆ ತಾರದೆ ನಡೆಯುವುದನ್ನು ಅವರು ಸಹಿಸುತ್ತಿರಲಿಲ್ಲ.

ಒಮ್ಮೆ ಹೀಗಾಯಿತು. ಅಶೋಕ್ ಮದುವೆಯಾಗಿದ್ದ ಹೊಸತು. ಕುಸುಮಕ್ಕ ಯಾವುದೋ ಹತ್ತಿರದ ಊರಿಗೆ ಹೋಗಿದ್ದರು. ಪ್ರೊಫೆಸರರು (ಅದಾಗಲೇ ಅವರಿಗೆ ನಿವೃತ್ತಿಯಾಗಿ ನಾಲ್ಕಾರು ವರ್ಷಗಳಾಗಿದ್ದವು) ಯಾವುದೋ ಊರಿಗೆ ಹೋಗಲೆಂದು ರೇಲ್ವೆ ಸ್ಟೇಷನ್ನಿಗೆ ಹೋದರು.

ಸರಿ, ಈ ಎರಡು ಜೋಡಿಹಕ್ಕಿಗಳು ಭಾರೀ ಯೋಜನೆಯೊಂದನ್ನು ಹಾಕಿಕೊಂಡವು. ಪೇಟೆಯಲ್ಲಿ ಒಂದಷ್ಟು ಸುತ್ತಾಡಿ ಸಿನಿಮಾಕ್ಕೆ ಹೋಗಿ ಬರುವುದೇ ಆ ಮಹಾನ್ ಯೋಜನೆ !

ಸರಿ, ಇನ್ನೆಲ್ಲಿ ತಡೆ? ಹೋದರು, ಸಿನಿಮಾ ನೋಡಿದರು. ಕಿಲಕಿಲ ನಗುತ್ತಾ ಸುತ್ತಡಿಕೊಂಡು ಪೇಟೆಯಲ್ಲಿ ಬರುತ್ತಿದ್ದಾಗ ಕುಟುಂಬದ ಮಿತ್ರರಾದ ಡಾ. ತವರಗೇರಿಯವರು ಸಿಕ್ಕರು. 'ಇದೇನು ಇಷ್ಟು ವಿರಾಮವಾಗಿ , ಈ ಹೊತ್ತಿನಲ್ಲಿ? ಎಂದರು. ತಾವು ಸಿನಿಮಾಕ್ಕೆ ಹೋಗಿ ಬಂದದ್ದನ್ನು ತಿಳಿಸಿದರು ಇವರು. 'ಆ ಫೀಲ್ಡ್ ಮಾರ್ಷಲ್‌ನ ಕೈಯಿಂದ ತಪ್ಪಿಸಿಕೊಂಡು ನೀವು ಬಂದದ್ದಾದರೂ ಹೇಗೆ?' ಎಂದು ಅವರ ಹಾಸ್ಯವಗಿ ಹೇಳಿದರು. ಪ್ರೊಫೆಸರ್ ಪರ ಊರಿಗೆ ಹೋದ ಸಂಗತಿಯನ್ನು ಈ 'ಹುಡುಗರು' ಹೇಳಿದರು.

ಹಾಗೆ ಸುತ್ತಾಡಿಕೊಂಡು ಮನೆಗೆ ಬಂದು ನೋಡುತ್ತಾರೆ–ಪ್ರೊಫೆಸರ್ ಸಾಹೇಬರು ಲಕ್ಷಣವಾಗಿ ಮನೆಯಲ್ಲಿ ಕುಳಿತಿದ್ದರೆ! ಅದು ಹೇಗೋ ಆಗಿ ಅವರ ಪ್ರಯಾಣ ತಪ್ಪಿಹೋಗಿತ್ತು !

ಈ ಎಳೆಯರನ್ನು ನಿಲ್ಲಿಸಿಕೊಂಡು ಚೆನ್ನಾಗಿ ಬೈದರು–ಹೇಳದೆಯೇ ಹೋದದ್ದಕ್ಕೆ ! 'ನಿಮಗೆ ಊಟ ಇಲ್ಲ !' ಎಂದರು. ಅಪ್ಪನ ವಿಧೇಯ ಸೈನಿಕನಾದ ಅಶೋಕ, ಅವರ ವಿಧೇಯ ಸತಿ, ಇಬ್ಬರೂ ತುಟಿಪಿಟಿಕ್ ಎನ್ನದೆ ಸುಮ್ಮನಾದರು.

ಮರುದಿನ ಬೆಳಗಾಗುವ ಹೊತ್ತಿಗೆ ಸಾಹೇಬರ ಕೋಪ ಪೂರ್ತಿ ಇಳಿದು ಹೋಗಿತ್ತು. ತಾವು ಅಂದದ್ದು ಹೆಚ್ಚಾಯಿತು ಎಂದೂ ಅನ್ನಿಸಿರಬೇಕು. ಇಬ್ಬರನ್ನೂ ಬಳಿಗೆ ಕರೆದು ನಿಧಾನವಾಗಿ ರಮಿಸಿ ಹೇಳಿದರು– 'ನಿಮಗೆ ಸಿನಿಮಾ ನೋಡಬೇಕು ಅನಿಸಿತ್ತೂ? ಇವತ್ತ ನಾ ಕರ್ಕೊಂಡು ಹೋಕ್ಕೀನಿ'.

೧೬

ಹೆಚ್ಚಿನ ಅಧ್ಯಯನಕ್ಕಾಗಿ ಅಶೋಕ ಬಾಗಿ ಯುರೋಪಿನಲ್ಲಿದ್ದ ಸಂದರ್ಭ. ಅವರ ಪತ್ನಿ ನಂದಿನಿ ಕರ್ನಾಟಕ ಕಾಲೇಜಿನಲ್ಲಿ ಬಿ.ಎ. ಓದುತ್ತಿದ್ದರು. ನಿವೃತ್ತ ಪ್ರೊಫೆಸರ್ ಬಾಗಿಯವರು ತಮ್ಮ ಹೊಲದಲ್ಲಿ ಕಬ್ಬಿನ ಕೃಷಿಯನ್ನು ಆ ಪರಿಸರದಲ್ಲೇ ಮೊದಲ ಬಾರಿಗೆ ಮಾಡಿಸುವಲ್ಲಿ ತಲ್ಲೀನರಾಗಿದ್ದರು.

ಸೊಗಸಾಗಿ ಬೆಳೆದ ಆಳೆತ್ತರರ ಕಬ್ಬನ್ನು ಕಟಾವು ಮಾಡಿಸಿದ ದಿನ ಪ್ರೊಫೆಸರರಿಗೆ ಹೆಮ್ಮೆಯೋ ಹೆಮ್ಮೆ! ಕೆಲವು ಕಬ್ಬಿನ ಜಲ್ಲೆಗಳನ್ನು ಮನೆಗೆ ತಂದರು. ತಮ್ಮ ಮಗಳಿಗಿಂತ ಹದಿನೈದು ವರ್ಷಕ್ಕೆ ಚಿಕ್ಕವಳಾದ ಮುದ್ದು ಸೊಸೆಗೆ ಅದನ್ನು ಮೊದಲು ತೋರಿಸಬೇಕೆಂದು ಅವರಿಗೆ ಆತುರ. ಆಕೆ ಕಾಲೇಜಿಗೆ ಹೋಗಿದ್ದಳು.

ಈ 'ತಾತ' ಒಂದು ಕಬ್ಬಿನ ಜಿಲ್ಲೆ ಹಿಡಿದು ಕರ್ನಾಟಕ ಕಾಲೇಜಿಗೆ ಬಂದೇಬಿಟ್ಟರು. ಸೊಸೆಯ ತರಗತಿ ಕೋಣೆ ಹುಡುಕಿ ಅಲ್ಲಿಗೆ ಬಂದು ಅವಳನ್ನು ಹೊರಗೆ ಕರೆದರು. ಎಂದು ವಿಶೇಷವೋ ಎಂದುಕೊಂಡು ಗಾಬರಿಯಿಂದ ಹೊರಬಂದ ಸೊಸೆಗೆ ಹೇಳಿದರು– 'ನಂದಿನೀ ನೋಡು, ನಮ್ಮ ಹೊಲದ ಕಬ್ಬು ಎಷ್ಟು ಛಂದ ಬಂದದ ಅಲ್ಲ?'

೧೭

ಪ್ರಸಿದ್ಧ ದಿಗಂಬರ ಮುನಿ ಏಲಾಚಾರ್ಯ ವಿದ್ಯಾನಂದ ಮುನಿಗಳು ದಕ್ಷಿಣಾಪಥ ವಿಹಾರ ಮಾಡುತ್ತಾ ಬಂದಿದ್ದ ಸಂದರ್ಭ. ಧಾರವಾಡದಲ್ಲಿ ಬೀಡುಬಿಟ್ಟಿದ್ದರು. ಆಗ ಅವರು 'ನಾನು ಪ್ರೊ. ಬಾಗಿಯವರ ಮನೆಗೆ ಹೋಗಿ ಬರಬೇಕು' ಎಂದರು. (ದಿಗಂಬರ ಮುನಿಗಳು ಹಾಗೆ ಯೊರೊಬ್ಬರ ಮನೆಗೆ ಹೋಗುವುದು ತುಂಬ ಅಪರೂಪ) ಆ ವೇಳೆಗೆ ಸರ್ ತೀರಿಕೊಂಡು ಕೆಲವರ್ಷಗಳಾಗಿದ್ದವು.

ಅದರಂತೆ ಅವರು ಬಂದರು. ಕೆಲ ಕ್ಷಣಗಳ ಕಾಲ ಆ ಮನೆಯಲ್ಲಿದ್ದರು. ಅಲ್ಲಿದ್ದವರನ್ನು ಆಶಿರ್ವದಿಸಿ ಪುನಃ ಹೊರಟು ಬಂದರು.

೧೮

ತಮ್ಮ ಸಹಪಾಠಿಯೊಬ್ಬರು ದಿಗಂಬರ ಮುನಿಯಾಗಿ ತೀವ್ರ ತಪಸ್ವಿಯೂ ಶಿಕ್ಷಣ ಸಂಸ್ಥೆಗಳ ಸ್ಥಾಪಕರೂ ಆದದ್ದು ಪ್ರೊ. ಬಾಗಿಯವರ ಮೇಲೆ ತುಂಬ ಪ್ರಭಾವ ಬೀರಿತ್ತು. ಅವರೇ –ಕುಂಭೋಜದ ಬಾಹುಬಲಿ ಆಶ್ರಮದ ಸಮಂತ ಭದ್ರ ಮುನಿಗಳು. ತ್ಯಾಗ, ಆಧ್ಯಾತ್ಮಿಕತೆ ಮತ್ತು ಸಮಾಜ ಸೇವೆಯ ತ್ರಿವೇಣೀ ಸಂಗಮವನ್ನು ಪ್ರೊ. ಬಾಗಿಯವರು ಅಲ್ಲಿ ಕಂಡುಕೊಂಡರು. ಬಹುಮಟ್ಟಿಗೆ ಅದು ಅವರ ಮನೋಧರ್ಮವನ್ನು ರೂಪಿಸಿಬಿಟ್ಟಿತು.

೧೯

'ದಶ ಲಕ್ಷಣ ಪರ್ವ' ದಲ್ಲಿ ಪೂಜೆ ನಡೆಯುತ್ತಿದ್ದ ವೇಳೆಯಲ್ಲಿ ಎರಡು ಬಾರಿ ಅವರು ಪ್ರಜ್ಞೆ ಕಳೆದುಕೊಂಡು ಬಿದ್ದಿದ್ದರು. ಒಮ್ಮೆ ಹಾಗೆ ಬೀಳುವ ಮೊದಲು ಅವರು ಅದನ್ನು ಮುಂದಾಗಿ ಹೇಳಿದ್ದರು– 'ನನಗೀಗ ಪ್ರಜ್ಞೆ ತಪ್ಪಬಹುದು. ಆಗ ನನ್ನ ಬಾಯಿಗೆ ನೀರು ಹಾಕಬೇಡಿ' ಎಂದು.

೨೦

ಪ್ರೊ. ಬಾಗಿಯವರ ಹಿರಿಯರ ಮಗ ಅಜಿತ ಹುಟ್ಟಿದ್ದು ಹಿಂಡಲಗಾ ಜೈಲಿನಲ್ಲಿ !
ಹೌದು, ಇದು ನಿಜ.
ಗಾಬರಿಯಾಗಬೇಕಿಲ್ಲ.

ಕುಸುಮಕ್ಕನ ಅಣ್ಣ ಹಿಂಡಲಗಾ ಜೈಲು ನಿರ್ಮಾಣದ ಕಂಟ್ರಾಕ್ಟರ್. ನಿರ್ಮಾಣದ ದೇಖರೇಖೆ ನೋಡಿಕೊಳ್ಳುವ ಸಲುವಾಗಿ ಆಗ ನಿರ್ಮಾಣವಾಗುತ್ತಿದ್ದ ಕಟ್ಟಡದ ಒಂದು ಭಾಗದಲ್ಲೇ ಅವರು ವಾಸವಾಗಿದ್ದರು. ಚೊಚ್ಚಲು ಬಸುರಿ ಕುಸುಮಕ್ಕ ಹೆರಿಗೆಗೆಂದು ತವರಿಗೆ ಬಂದವರೂ ಸಹ ಅಲ್ಲಿಯೇ ಇದ್ದರು. ದಿನ ತುಂಬಿ ಆ 'ಮನೆ'ಯಲ್ಲೇ ಹೆರಿಗೆಯಾಯಿತು. (೧೯೨೨)

ಪ್ರೊ. ಬಾಗಿ ಕುಟುಂಬಕ್ಕೂ ಕರ್ನಾಟಕದ ಪ್ರಸಿದ್ಧ ಹಿಂಡಲಗಾ ಜೈಲಿಗೂ ಇರುವ 'ವಿಶಿಷ್ಟ' ಸಂಬಂಧ ಈ ರೀತಿಯದು !

೭. ನಂಬಿಕೆ, ನಡವಳಿಕೆ

ಒಬ್ಬ ವ್ಯಕ್ತಿಯು ದೊಡ್ಡವನಾಗುವುದು ತನ್ನ ನಡವಳಿಕೆಗಳಿಂದ. ಇದನ್ನೇ ಚಾರಿತ್ರ್ಯ ಎನ್ನುತ್ತಾರೆ. ಒಳ್ಳೆಯ ಚಾರಿತ್ರ್ಯವನ್ನು ಜೈನ ಧರ್ಮ ತಾತ್ವಕವಾಗಿ 'ಸಮ್ಯಕ್ ಚಾರಿತ್ರ್ಯ' ಎನ್ನುತ್ತದೆ.

ಚಾರಿತ್ರ್ಯದ ಮೂಲ, ನಂಬಿಕೆ ಅಥವಾ ಶ್ರದ್ಧೆ. ಶ್ರದ್ಧೆ ಬೇರಾದರೆ ಚಾರಿತ್ರ್ಯ ಆ ಶ್ರದ್ಧಾ ಮೂಲದ ಫಲ. ಒಳ್ಳೆಯ ತತ್ವಗಳಲ್ಲಿರುವ ನಂಬಿಕೆಯೇ–ಸಮ್ಯಗ್ದರ್ಶನ.

ಶ್ರದ್ಧೆ, ಅಥವಾ ನಂಬಿಕೆ ಕುರುಡಾದದ್ದಾಗಿರಬಾರದು. ನಮ್ಮ ಮನಕ್ಕೆ ಮುಟ್ಟಿದ ತತ್ವಗಳನ್ನು ಬುದ್ಧಿಯ ಬಲದಿಂದ ವಿಶ್ಲೇಷಿಸಿ ನೋಡಬೇಕು. ಇಂಥ ವಿಶ್ಲೇಷಣೆಯಿಂದ ಹುಟ್ಟುವ ತಿಳಿವಳಿಕೆಯೇ ಜ್ಞಾನ. ಇದನ್ನೇ ಜೈನದರ್ಶನವು 'ಸಮ್ಯಕ್ ಜ್ಞಾನ' ಎನ್ನುತ್ತದೆ. ಈ ಸಮ್ಯಕ್ ದರ್ಶನ, ಜ್ಞಾನ, ಚಾರಿತ್ರ್ಯಾಗಳು ವ್ಯಕ್ತಿಯ ಬದುಕಿಗೆ ಆಧಾರವಾಗಿರಬೇಕು. ಕನ್ನಡ ಕವಿ, 'ಭರತೇಶ ವೈಭವ' ಕಾವ್ಯದ ಖ್ಯಾತಿಯ ರತ್ನಾಕ್ರ ವರ್ಣಿ ತುಂಬ ತಿಳಿಯಾದ ಮಾತಿನಲ್ಲಿ ನಾಲ್ಕೇ ಸಾಲುಗಳಲ್ಲಿ ಈ ತತ್ವವನ್ನು ನಿರೂಪಿಸಿದ್ದಾನೆ–

ತತ್ವ ಪ್ರೀತಿ ಮನಕ್ಕೆ ಮುಟ್ಟಲದು ಸಮ್ಯಗ್ದರ್ಶನಂ
ಮತ್ತಮಾತತ್ವಾರ್ಥಂಗಳನೊಲ್ದು ಭೇದಿಪುದು ಸಮ್ಯಜ್ಞಾನಮಾ
ಬೋಧದಿಂ ಸತ್ವಂಗಳ್ ಕಿಡದಂತುಟೋವಿ ನಡೆಯಲ್
ಸಮ್ಯಗ್ಚರಿತ್ರಂ ಸುರತ್ನತ್ವಂ ಮೂರಿವು ಮುಕ್ತಿಗೆಂದರಿಪಿದ್ದೈ ರತ್ನಾಕರಾಧೀಶ್ವರಾ ॥

ಹೀಗೆ, ಸಮ್ಯಗ್ದರ್ಶನ, ಸಮ್ಯಕ್‌ಜ್ಞಾನ, ಸಮ್ಯಕ್ಚಾರಿತ್ರ್ಯಗಳನ್ನೇ 'ರತ್ನತ್ರಯ' ಗಳೆನ್ನುತ್ತದೆ ಜೈನದರ್ಶನ. ಇವೇ ಮುಕ್ತಿಗೆ ಮಾರ್ಗ.

"ಸಮ್ಯಗ್ದರ್ಶನ ಜ್ಞಾನ ಚಾರಿತ್ರಾಣಿ ಮೋಕ್ಷಮಾರ್ಗ: "

ಇದು ಪ್ರಸಿದ್ಧ ಗ್ರಂಥ 'ತತ್ವಾರ್ಥಸೂತ್ರ'ದ ಮೊಟ್ಟ ಮೊದಲ ಸೂತ್ರ.

ಪ್ರೊ. ಬಿ.ಬಿ. ಬಾಗಿಯವರ ಬದುಕಿನಲ್ಲಿ ಈ ರತ್ನತ್ರಯಗಳು ತುಂಬ ಸಹಜ ರೀತಿಯಲ್ಲಿ ಹಾಸುಹೊಕ್ಕಾಗಿ ಹೆಣೆದುಕೊಂಡಿದ್ದವು. ಅವರ ಎಲ್ಲ ನಂಬಿಕೆ, ನಡವಳಿಕೆಗಳ ಮೂಲ ಮಾನವೀಯತೆ. ಅದು ಅವರ ಧಾರ್ಮಿಕ ಶ್ರದ್ಧೆ ಅಧ್ಯಯನಗಳಿಂದ ಚೆನ್ನಾಗಿ ಪೋಷಿತಗೊಂಡು ಪರಿಪುಷ್ಟವಾಗಿತ್ತು. ಅವರ ಬುದ್ಧಿ ಮನಸ್ಸುಗಳು ಪ್ರಬುದ್ಧತೆ ಪಡೆಯುವ ಹೊತ್ತಿಗೆ ಮಹಾತ್ಮಾ ಗಾಂಧೀಜಿಯ ಬದುಕು ಬೋಧನೆಗಳು ಅವರನ್ನು ಆಕರ್ಷಿಸಿದ್ದವು. ದ್ರೋಣರನ್ನು ಆರಾಧಿಸಿದ ಏಕಲವ್ಯನಂತೆ, ದೂರದಲ್ಲಿದ್ದುಕೊಂಡೇ ಯಾರಿಗೂ ಹೇಳದೆಯೇ ಅವರು ಗಾಂಧೀಜಿಯ ತತ್ವನೀತಿಗಳನ್ನು ತಮ್ಮಲ್ಲಿ ಆಳವಡಿಸಿಕೊಳ್ಳುತ್ತಾ ಹೋದರು. ಈ ಕಾರಣದಿಂದಾಗಿಯೇ ಯಾವ 'ಅತಿ'ಗೂ ಹೋಗದ ಸಮತೋಲಿತ, ಸಮಾಧಾನದ ಬದುಕು ಅವರದ್ದಾಗಿತ್ತು. ಅವರ ಶಿಷ್ಯೆ ಡಾ. ವತ್ಸಲಾ ಮುಖರ್ಜಿ ಕಂಡಂತೆ– "ಎಲ್ಲ ರೀತಿಯಲ್ಲಿಯೂ ಒಂದು ಪೂರ್ಣ ಜೀವನ ಪ್ರೊ. ಬಾಗಿ ಅವರದ್ದು. ಎಲ್ಲ ವಿಷಯಗಳಲ್ಲಿಯೂ ಒಂದು ಸಾಮಂಜಸ್ಯಯುಕ್ತವಾದ ಸಮತೋಲನೆಯುಳ್ಳ ವ್ಯವಹಾರ; ಜೈನಧರ್ಮದ ಅಭಿಮಾನ, ನಿರಾಡಂಬರತೆ, ಫರ್ಗ್ಯುಸನ್ ಕಾಲೇಜಿನ ವಿದ್ಯಾಭಿಮಾನ, ಜ್ಞಾನ ಪಿಪಾಸೆಗಳಿಂದ ಅವರ ಜೀವನ ಸಮೃದ್ಧವಾಗಿತ್ತು."

ಪ್ರೊ.ಬಿ.ಬಿ. ಬಾಗಿಯವರ ಜೀವನ ಶ್ರದ್ಧೆಯಲ್ಲಿ ಪ್ರಥಮ ಆದ್ಯತೆ ಅಹಿಂಸೆಗೆ. ಆನಂತರದ ನಿಷ್ಠೆ 'ಪರಿಮಿತ ಪರಿಗ್ರಹ'ಕ್ಕೆ. ಹಣ ಹಾಗೂ ವಸ್ತುಗಳು ಎಷ್ಟು ಬೇಕೋ ಅಷ್ಟನ್ನು ಮಾತ್ರ ಇಟ್ಟುಕೊಳ್ಳುತ್ತಿದ್ದರು. ಹೆಚ್ಚಿನದನ್ನು ಅವರು ಇತರರಿಗೆ ದಾನ ಮಾಡಿ ಬಿಡುತ್ತಿದ್ದರು. ಅವರು ಹೆಚ್ಚು ಸಂಗ್ರಹಿಸಿಟ್ಟುಕೊಂಡದ್ದೆಂದರೆ ಪುಸ್ತಕಗಳನ್ನು ಮಾತ್ರ. ಒಳ್ಳೆಯ ಕಾಲದಲ್ಲೇ ಚೆನ್ನಾದ ಮನೆ ಮಾಡಿಕೊಂಡರು. ಅದರಲ್ಲಿ ಸೋಫಾಸೆಟ್‌ನಂತಹ ಆಡಂಬರದ ವಸ್ತುಗಳಿರಲಿಲ್ಲ (ಈಗಲೂ ಇಲ್ಲ) ಮಕ್ಕಳ ವಿವಾಹ ಇತ್ಯಾದಿ ಕೆಲಸಗಳಿಗಾಗಿ ಬೇಕಾದಷ್ಟು ಕನಿಷ್ಠ ಹಣ ಇಟ್ಟುಕೊಂಡರು. ಅಲ್ಲಿಂದ ಮುಂದಿನದನ್ನೆಲ್ಲ ಗುಪ್ತದಾನವಾಗಿ ಯೋಗ್ಯವೆನಿದೆಡೆಗೆ ಕೊಡುತ್ತಾ ಹೋದರು. ಈ ತತ್ತ್ವಪ್ರೀತಿಯಿಂದಾಗಿಯೇ 'ಟ್ಯೂಷನ್' ದಂಧೆಯತ್ತ ಅವರ ಮನೆ ಸೋಲಲಿಲ್ಲ. ಅಹಿಂಸೆಯಂತೂ ಬದುಕಿನ ಅತ್ಯಗತ್ಯವಾದ ಅಂಗ, ಬುನಾದಿ ಎಂದೇ ಅವರ ಶ್ರದ್ಧೆಯಾಗಿತ್ತು.

ಹೀಗೆ, ಅಹಿಂಸೆ, ಅಪರಿಗ್ರಹ, ದಾನ, ಸರಳತೆ, ಸ್ವದೇಶೀಭಾವನೆ ಜ್ಞಾನಪಿಪಾಸೆ–ಇವೆಲ್ಲ ಪ್ರೊ. ಬಾಗಿಯವರ ಜೀವನ ಶ್ರದ್ಧೆಗಳಾಗಿದ್ದವು. ಇಂಥ ವಿಚಾರಗಳಲ್ಲಿ ರಾಜಿ ಮಾಡಿಕೊಳ್ಳಲು ಅಥವಾ ಬಿಟ್ಟುಕೊಡಲು ಅವರು ಸಿದ್ಧರಿರಲಿಲ್ಲ. ಅವರ ಗೆಳೆಯರಿಗೂ ಅವರಿಗೂ ವಾದಗಳಾಗುತ್ತಿದ್ದುದು ಇಂಥ ಸಂದರ್ಭಗಳಲ್ಲೇ.

ಅವರ ಗೆಳೆಯರ ಗುಂಪೂ ಸಹ ಚಿಕ್ಕದು. ಪ್ರೊ. ಸಿ.ಡಿ. ದೇಶಪಾಂಡೆಯವರು ಹೇಳುವಂತೆ "ಅವರ ಗೆಳೆಯರ ಗುಂಪು ಸಣ್ಣದಾಗಿತ್ತು. ಪ್ರೊ. ಸ.ಸ. ಮಾಳವಾಡರಂಥ ಕರ್ನಾಟಕ ಕಾಲೇಜಿನ ಕೆಲವು ಅಧ್ಯಾಪಕರು, ಕೆಲವು ಶಾಲಾ ಅಧ್ಯಾಪಕರು, ಕೆಲವರು ವೈದ್ಯರು, ಪ್ಲೀಡರುಗಳು. ಇವರನ್ನು ಹತ್ತಿರ ಸೇರಿಸಿದ್ದೆಂದರೆ ತಿಳಿಯಬೇಕೆಂಬ ಆಕಾಂಕ್ಷೆ. ನಮ್ಮ ಚರ್ಚಾವಿಷಯಗಳು ಹೆಚ್ಚಾಗಿ ಫಿಲಾಸಫಿ ಮತ್ತು ಧರ್ಮಕ್ಕೆ ಸಂಬಂಧಿಸಿರುತ್ತಿದ್ದವು. ಸತ್ಯ, ಅಹಿಂಸೆ, ಹಾಗೂ ಗಾಂಧೀ ಪ್ರಣೀತ ಜೀವನ ಮಾರ್ಗ–ಇವು ತುಂಬ ಹೆಚ್ಚು ಚರ್ಚೆಗೆ ಗ್ರಾಸವಾಗುತ್ತಿದ್ದವು. ತಮ್ಮ ನಂಬಿಕೆಗಳಲ್ಲಿ ಪ್ರೊ. ಬಾಗಿ ಅವರು ತುಂಬ ದೃಢವಾಗಿದ್ದರು. ಅವರು ಆ ವಿಷಯಗಳಲ್ಲಿ ರಾಜಿ ಮಾಡಿಕೊಳ್ಳುತ್ತಿರಲಿಲ್ಲ. ತಮ್ಮ ಮಾತುಗಳ ಬಗ್ಗೆ ಅವರು ಗಣಿತದಷ್ಟೇ

ಕರಾರುವಾಕ್ ಆಗಿರುತ್ತಿದ್ದರು. ತಾವು ಹೇಳಬೇಕಾದ್ದನ್ನು ಸಂಕ್ಷಿಪ್ತವಾಗಿ ಹಾಗೂ ಸ್ಪಷ್ಟವಾಗಿ ಹೇಳುವುದು ಅವರ ಕ್ರಮ. ಅವರು ನಮ್ಮೆಲ್ಲರ ಗೌರವಕ್ಕೆ ಪಾತ್ರರಾಗಿದ್ದರು.

ನಮ್ಮ ಚರ್ಚಾಗೋಷ್ಠಿಗಳು ಸಾಮಾನ್ಯವಾಗಿ ಅವರ ಮನೆಯಲ್ಲೇ ನಡೆಯುತ್ತಿದ್ದವು. ಶ್ರೀಮತಿ ಬಾಗಿಯವರು ಮಂದಸ್ಮಿತದ ಅತಿಥೇಯಳ ಪಾತ್ರ ವಹಿಸುತ್ತಿದ್ದರು."

ಸರಳ ಜೀವನದಿಂದ ಸತ್ಯಸಂಧತೆ ಸಾಧ್ಯವಾಗುತ್ತದೆ. ಬಹುಶಃ ಸುಳ್ಳು ಹೇಳುವ ಪ್ರಸಂಗ ಪ್ರೊ. ಬಾಗಿಯವರ ಎಂಭತ್ತೈದು ವರ್ಷಗಳ ದೀರ್ಘ ಜೀವನದಲ್ಲಿ ಒಮ್ಮೆಯೂ ಬಂದಿರಲಿಕ್ಕಿಲ್ಲ. ಬಂದಿದ್ದರೂ ಅವರು ಹಾಗೆ ಮಾಡುತ್ತಿರಲಿಲ್ಲ ಎಂಬುದು ಅವರ ಜೀವನ ಶೈಲಿಯನ್ನು ತಿಳಿದ ಯಾರೂ ಊಹಿಸಬಹುದು. ಇನ್ನು ಕಳವು, ಪರಸ್ತ್ರೀ ಚಿಂತನೆಗಳಂತೂ ಅವರ ಕನಸಿನಲ್ಲೂ ಸುಳಿದಿದ್ದಿರದ ಸಂಗತಿಗಳು. ('ನನ್ನ ಅಪ್ಪ ಸಾಕ್ಷಾತ್ ಶ್ರೀರಾಮನಂತಿದ್ದರು' ಎಂದು ಮಗಳು ಸುಧಾ ಈಗಲೂ ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ.) ಹೀಗಾಗಿ ಜೈನ ಶ್ರಾವಕ ಯಾವ ಅದನ್ನು ಮನಃಪೂರ್ವಕವಾಗಿ ಇಚ್ಛೆಪಟ್ಟು ಚಚುತಪ್ಪದಂತೆ ಅವರು ತಮ್ಮ ಬದುಕಿನಲ್ಲಿ ತುಂಬ ಸಹಜ ರೀತಿಯಲ್ಲಿ ಆಳವಡಿಸಿಕೊಂಡುಬಿಟ್ಟಿದ್ದರು.

ಧರ್ಮದ ಈ ಮೂಲತತ್ವಗಳು ಅವರಿಗೆ ಪ್ರಿಯವೂ ಒಪ್ಪಿತವೂ ಆಗಿದ್ದವು. ಇವುಗಳ ನಂತರ ಬಂದ ಸಾಂಪ್ರದಾಯಿಕ ಕಂದಾಚಾರಗಳ ಬಗ್ಗೆ ಅವರಿಗೆ ಶ್ರದ್ಧೆ ಇರಲಿಲ್ಲ. ಡಾ. ಮಹಾವೀರ ಲಗಾರೆ ಅವರು ಭಾವಿಸುವಂತೆ –'ಜೈನ ಧರ್ಮ ಅವರಿಗೆ ಪುರಾಣಗಳ ಗಂಟು ಅಥವಾ ಆಚರಿಸಲಾಗದ ಕ್ರಮವಾಗಿತ್ತು. ಆ ಧರ್ಮದ ಬಗ್ಗೆ ಅವರಿಗೆ ಅಭಿಮಾನವಿತ್ತು. ವೈಯಕ್ತಿಕವಾಗಿ ಅವರು ಧಾರ್ಮಿಕರಾಗಿದ್ದರು. ಜೈನಧರ್ಮದ ಮೂಲತತ್ವಗಳನ್ನು ಎಲ್ಲರೂ ತಿಳಿದಿರಬೇಕೆಂದು ಅವರು ಬಯಸುತ್ತಿದ್ದರು. ಈ ವಿಚಾರದಲ್ಲಿ ಅವರು ಬೇರೆಯವರಿಗಿಂತ ಭಿನ್ನವಾಗಿದ್ದರು."

ಇಷ್ಟರ ಹೊರತಾಗಿ ಉಳಿದ ಮತಭೇದಗಳು ಅವರ ದೃಷ್ಟಿಯಲ್ಲಿ ಗೌಣವಾಗಿದ್ದವು. ತಮ್ಮ ಮನೆಯಲ್ಲಿ ಅವರು ಜೈನ ಸಂಪ್ರದಾಯದ ಪರ್ವಗಳಾದ ದಶಲಕ್ಷಣ, ಅಷ್ಟಾಹ್ನಿಕ, ಜೀವದಯಾಷ್ಟಮಿ ಇಂತಹವುಗಳನ್ನು ಶ್ರದ್ಧೆ ಸಂಭ್ರಮಗಳಿಂದ ಪತಿ ಪತ್ನಿಯರು ಕೂಡಿ ಆಚರಿಸುತ್ತಿದ್ದರು. ಆದರೆ ಇದನ್ನು ಮಿರಿದ ಜಾತಿ ಬೇಧಗಳಿಗೆ ಅವರು ಬೆಲೆ ಕೊಡುತ್ತಿರಲಿಲ್ಲ. 'ಅವೆಲ್ಲ ಆನಂತರದ ಕಂದಾಚಾರದ ಫಲ' ಎಂದು ಅವರು ಭಾವಿಸಿದ್ದರು. ಜೈನರಲ್ಲಿನ ಒಳಪಂಗಡಗಳನ್ನು ಅವರು ಗಣನೆಗೆ ತೆಗೆದುಕೊಳ್ಳುತ್ತಿದ್ದಿರಲಿಲ್ಲ. 'ಜಿನಮಾರ್ಗ ಎಂದರೆ ಮುಗಿಯಿತು. ಉಳಿದೆಲ್ಲ ಗೌಣವಾಗಬೇಕು' ಎನ್ನುತ್ತಿದ್ದರು. ಅವರ ನಡೆನುಡಿಗಳಿಗೆ ಅಂತರವಿರದ್ದರಿಂದ ಈ ಉಪಪಂಗಡಗಳ ನಿರ್ಲಕ್ಷಿಸುವಿಕೆಯನ್ನು ಅವರು ತಮ್ಮ ಮನೆಯಿಂದಲೇ ಆರಂಭಿಸಿದರು. ತಮ್ಮ ಹಿರಿಯಮಗ ಅಜಿತ್ ಅವರ ಮದುವೆಯನ್ನು ೧೯೫೦ ರಲ್ಲಿ ಜೈನ ಚತುರ್ಥ ಪಂಗಡಕ್ಕೆ ಸೇರಿದ ಕನ್ಯೆ ಅವನಿಯೊಂದಿಗೆ ಮಾಡಿದರು. ಅದರ ಮರುವರ್ಷ ಅಂದರೆ ೧೯೫೧ ರಲ್ಲಿ ತಮ್ಮ ಮಗಳು ಸುಧಾಳ ಮದುವೆಯನ್ನು ಉತ್ತರ ಭಾರತದ ಮಾರವಾಡೀ ಜೈನರಾದ ಡಾ. ಸುಖಾನಂದ್ ಅವರೊಂದಿಗೆ ನಡೆಸಿದರು. ಕೊನೆಯ ಮಗ ಅಶೋಕ್ ಅವರ ಮದುವೆಯನ್ನು ಕೊಲ್ಲಾಪುರದ ಸುಸಂಸ್ಕೃತ ಬೋಗಾರ ಜೈನ ಕುಟುಂಬದ ಕನ್ಯೆ ನಂದಿನಿಯವರೊಂದಿಗೆ ಮಾಡಿದರು. ಈಕೆಯ ತಂದೆ ಇಚಲಕರಂಜಿಯ

ಪಂಚಗಂಗಾ ಸಕ್ಕರೆ ಕಾರ್ಖಾನೆಯ ಎಂ. ಡಿ. ಆಗಿದ್ದ ಬಿ. ಎನ್. ಗರಗಟೆ ಅವರು. ರತ್ನಾಕರ್ ಬ್ಯಾಂಕ್– ಇವರೇ ನೆಟ್ಟು ಬೆಳೆಸಿದ ಸಸಿ.

(ಕರ್ನಾಟಕದ ದಿಗಂಬರ ಜೈನರಲ್ಲಿ ಚತುರ್ಥ, ಪಂಚಮ ಎಂಬ ಎರಡು ಮುಖ್ಯ ಭೇದಗಳು; ಪಂಚಮರು ತಮ್ಮನ್ನು ಚತುರ್ಥರಿಗಿಂತ ಮೇಲೆಂದು ಭಾವಿಸಿಕೊಳ್ಳುತ್ತರೆ. ಪ್ರೊ. ಬಾಗಿಯವರು ಮೂಲತಃ ಈ ಪಂಚಮ ಪಂಗಡಕ್ಕೆ ಸೇರಿದವರು. ಜೈನರಲ್ಲಿನ ಈ ಒಳಭೇದಗಳು ಈಗ ಬಹುಮಟ್ಟಿಗೆ ಅಳಿಯುತ್ತಲಿವೆ. ಬೋಗಾರ ಎಂಬುದು ಪಂಚಮರಲ್ಲಿನ ಒಂದು ಒಳಪಂಗಡ ಬಹುಮಟ್ಟಿಗೆ ಇವರು ಪಾತ್ರೆ ತಯಾರಿಕೆಯ ಕೆಲಸ ಮಾಡುತ್ತಿದ್ದವರು.

ಭಾರತದ ಜೈನರಲ್ಲಿ ದಿಗಂಬರ ಶ್ವೇತಾಂಬರ ಎಂಬೆರಡು ಪ್ರಮುಖ ಶಾಖೆಗಳು. ಇವೆರಡರ ನಡುವೆ ಕೆಲವು ಪ್ರಮುಖ ತಾತ್ವಿಕ ಭಿನ್ನಾಭಿಪ್ರಾಯಗಳಿವೆ. ಆದರೆ ಮಂತ್ರಗಳು, ಪಂಚಾಣುವ್ರತ, ರತ್ನತ್ರಯ, ಶ್ರಾವಕಾಚಾರದಂತಹ ಸಂಗತಿಗಳು ಉಭಯ ಸಾಮಾನ್ಯ.)

ಅಂತರಜಾತಿಯ ವಿವಾಹದ ಬಗ್ಗೆ ಅವರಿಗೆ ತಿರಸ್ಕಾರವಿರಲಿಲ್ಲ. ಅದೊಂದು ಸೋಗು, ವ್ಯಾಮೋಹವಾದರೆ ಪ್ರಯೋಜನವಿಲ್ಲ ಎಂದವರು ತಿಳಿದಿದ್ದರು. ತಮ್ಮ ಹಾಸ್ಟೆಲ್‌ನಲ್ಲೇ ಓದಿದ್ದ ಜೈನಯುವಕನೊಬ್ಬ ಅನ್ಯಜಾತಿಯ ಹುಡುಗಿಯನ್ನು ಮದುವೆಯಾಗಲಿದ್ದಾನೆಂಬ ಮಾಹಿತಿಯನ್ನು ಅವರು ತುಂಬ ಸಮಾಧಾನದಿಂದಲೇ ಸ್ವೀಕರಿಸಿದ್ದರು. ಅವರ ಷರತ್ತು ಇಷ್ಟೇ ಆಗಿತ್ತು– ಆಕೆಯೂ ಸಸ್ಯಾಹಾರಿಯಾಗಿದ್ದು ಸುಸಂಸ್ಕೃತಳಿರಬೇಕು ಎಂದು.

ಪ್ರಾಚೀನ ತತ್ವಗಳಲ್ಲಿ ಶ್ರದ್ಧೆ ಹೊಂದಿದ್ದರೂ ಅದಕ್ಕೆ ವಿರುದ್ಧವಲ್ಲದ ಆಧುನಿಕ ಸಂಗತಿಗಳನ್ನು ಅವರು ಒಪ್ಪಿಕೊಳ್ಳುತ್ತಿದ್ದರು ಬೆಂಬಲಿಸುತ್ತಿದ್ದರು. ಜಾತಿಗಳ ಕೃತಕ ವಿಂಗಡಣೆಯನ್ನು ಅವರು ನಿರಾಕರಿಸಿದ್ದು ಇದಕ್ಕೊಂದು ದೊಡ್ಡ ಉದಾಹರಣೆ. 'ತತ್ತ್ವಕ್ಕಿಂತ ಜಾತಿ ಮುಖ್ಯವಲ್ಲ' ಎಂಬುದು ಅವರ ನಿಲುವಾಗಿತ್ತು. ಬೆಳೆಯುತ್ತಿದ್ದ ವಿಜ್ಞಾನದ ಪ್ರಯೋಜನಗಳನ್ನು ಪಡೆದುಕೊಳ್ಳಲು ಅವರೆಂದೂ ಹಿಂದುಮುಂದು ನೋಡಲಿಲ್ಲ. ತಮ್ಮ ಪರಿಸರದಲ್ಲಿ ಗ್ರಾಮಾಫೋನ್, ರೇಡಿಯೋ, ಬರ್ನೇನ್ ಗ್ಯಾಸ್‌ಗಳನ್ನು ಕೊಂಡುತಂದ ಮೊದಲಿಗರು ಅವರು. ಹೆಣ್ಣು ಮಕ್ಕಳ ಅಭಿವೃದ್ಧಿಗೆ ಸಮಾನ ಅವಕಾಶವಿರಬೇಕೆಂದು ನಂಬಿದ್ದವರು ಅವರು. ತಮ್ಮ ಮಗಳನ್ನು ಚೆನ್ನಾಗಿ ಓದಿಸಿದರು. ತಮ್ಮ ಪರಿಚಯದವರ ಮನೆಯ ಹೆಣ್ಣುಮಕ್ಕಳ ವಿದ್ಯಾರ್ಜನೆಗೆ, ಪ್ರತಿಭಾವಿಕಾಸಕ್ಕೆ ಪ್ರೋತ್ಸಾಹಿಸಿದರು. ತಮ್ಮ ಕೈಲಾದ ನೆರವು ಕೊಟ್ಟರು. ಹೆಣ್ಣುಮಕ್ಕಳು ವೇದಿಕೆ ಏರುವುದೇ ಅಪರೂಪವಾಗಿದ್ದ ಕಾಲದಲ್ಲಿ ತಮ್ಮ ಮಗಳು ನಾಟಕದಲ್ಲಿ ಪಾತ್ರಮಾಡಲು ಪ್ರೋತ್ಸಾಹಿಸಿದರು. ತಮ್ಮ ಕ್ರಿಯ ಸೊಸೆ ನಂದಿನಿಯನ್ನು ಮನೆ ತುಂಬಿಸಿಕೊಂಡ ಬಳಿಕ ಆಕೆಗೆ ಕನ್ನಡ ಕಲಿಯಲು ಪ್ರೋತ್ಸಾಹಿಸಿ ಕಲಿಸಿದರು. ಅಷ್ಟೇ ಅಲ್ಲ, ಕರ್ನಾಟಕ ಕಾಲೇಜಿಗೆ ಆಕೆಯನ್ನು ಸೇರಿಸ್ ಪದವೀಧರಳನ್ನಾಗಿ ಮಾಡಿದರು. ತಮ್ಮ ಹದಿನೈದನೇ ವಯಸ್ಸಿನಲ್ಲಿ ಮದುವೆಯಾಗಿ ಬಂದ ಶಾಂತಾದೇವಿ ಮಾಳವಾಡ ಅವರು ಇಂಗ್ಲೀಷ್ ಕಲಿಯಬಯಸಿದಾಗ ಎರಡೇ ದಿನಗಳಲ್ಲಿ ಆಕೆಯ ಮನೆಗೇ ಹೋಗಿ ಕಲಿಸಬಲ್ಲ ಸುಯೋಗ್ಯ ಅಧ್ಯಾಪಕಿಯನ್ನು ಗೊತ್ತು ಮಾಡಿಕೊಟ್ಟರು. ಆಧುನಿಕತೆಗೆ ಅವರು ತಮ್ಮ ಮನೆ–ಮನೆಗಳನ್ನು ಸದಾ ತೆರೆದಿಟ್ಟಿದ್ದರು. ಅದು ಸಭ್ಯತೆಯ ಎಲ್ಲೆಯೊಳಗೆ ಸದಾ ಇರಬೇಕೆಂಬುದೊಂದೇ ಅವರ ನಿರೀಕ್ಷೆಯಾಗಿತ್ತು. ಎಲ್ಲೆಯೊಳಗೆ ಸದಾ

ಇರಬೇಕೆಂಬುದೊಂದೆ ಅವರ್ ನಿರೀಕ್ಷೆಯಾಗಿತ್ತು. ೧೯೫೨ ರಲ್ಲಿ ಅವರು ಸಪತ್ನೀಕರಾಗಿ ಸಮ್ಮೇದ ಶಿಖರ್ಜಿಯಾತ್ರೆ ಕೈಗೊಂಡಿದ್ದರು.

ಗಾಂಧೀಜಿ ತತ್ವಾನುಯಾಯಿಯಾದ ಅವರು ಹರಿಜನ, ನವಜೀವನ ಪತ್ರಿಕೆಗಳಿಗೆ ಚಂದಾದಾರರಾಗಿದ್ದರು. ಕರ್ನಾಟಕ ಕಾಲೇಜಿಗೆ ಅವರು ಕೊಡುಗೆಯಾಗಿ ಬರೆಸಿಕೊಟ್ಟ ಗಾಂಧೀಜಿಯ ದೊಡ್ಡ ತೈಲಚಿತ್ರ ಈಗಲೂ ಅಲ್ಲಿದೆ.

ಅವರು ತುಂಬ ಓದುತ್ತಿದ್ದರು. ಜೈನ ತತ್ವಜ್ಞಾನವನ್ನು ಚೆನ್ನಾಗಿ ಅಭ್ಯಸಿಸಿದ್ದರು. ವಿಜ್ಞಾನ, ಗಣಿತದ ಪುಸ್ತಕಗಳು ಅವರ ಮನೆಯ ಗ್ರಂಥಾಲಯದಲ್ಲಿ ಸಾಕಷ್ಟು ಇದ್ದವು. ನ್ಯಾಷನಲ್ ಜಿಯೋಗ್ರಫಿಕ್, ಹಾಗೂ ರೀಡರ್ಸ್ ಡೈಜಿಸ್ಟ್ ಪತ್ರಿಕೆಗಳನ್ನು ನಿಯಮಿತವಾಗಿ ತರಿಸಿ ಓದುತ್ತಿದ್ದರು. ಶ್ರೀಮತಿ ಸುಧಾ ಹೇಳುವಂತೆ– 'ಬೇಸಿಗೆ ರಜೆಯಲ್ಲಿ ನಾನು ನನ್ನ ಮಕ್ಕಳನ್ನು ಧಾರವಾಡಕ್ಕೆ ಕೊಂಡೊಯ್ದಾಗ ಅವರು ಆ ಮ್ಯಾಗಜೈನ್‌ಗಳನ್ನು ಆಸಕ್ತಿಯಿಂದ ಓದುತ್ತಿದ್ದರು. ಅಂಥ ಪುಸ್ತಕಗಳನ್ನೇ ನನ್ನ ಮಕ್ಕಳು ಆವರೆಗೆ ನೋಡಿರಲಿಲ್ಲ.'

ಸ್ನೇಹಕ್ಕೆ ಅವರಲ್ಲಿ ಹಿರಿಯ ಕಿರಿಯರೆಂಬ ಭೇದವಿರಲಿಲ್ಲ. 'ಎನಗಿಂತ ಕಿರಿಯರಿಲ್ಲ' ಎಂಬ ನಮ್ರತೆ ಅವರಲ್ಲಿ ತುಂಬಿರುತ್ತಿತ್ತು. ಸಮರ್ಥ ವಿದ್ಯಾರ್ಥಿಗಳನ್ನು ಗಣಿತದಲ್ಲಿ ಹೆಚ್ಚಿನ ಓದಿಗೆ ಪ್ರೋತ್ಸಾಹಿಸುತ್ತಿದ್ದರು. ಕಾಲೇಜಿಗೆ ಹೊಸದಾಗಿ ಕೆಲಸಕ್ಕೆ ಸೇರಿದ ಕಿರಿಯರನ್ನು ಮೊದಲಾಗಿ ಸ್ವಾಗತಿಸುತ್ತಿದ್ದವರು ಅವರೇ. ಸ್ವಾಗತದ ದೊಡ್ಡನಗೆ ಅವರ ಚಹರೆಯ ಒಂದು ಭಾಗವಾಗಿರುತ್ತಿತ್ತು. ತಾವಾಗಿಯೇ ಹೋಗಿ ಕಿರಿಯ ಸಹೋದ್ಯೋಗಿಯ ಪಕ್ಕ ಕೂತು 'ಹೇಗಿದ್ದೀರಿ?' ಎಂದು ವಿಚಾರಿಸುವ ಸರಳತೆ ಅವರಿಗೆ ಸಹಜವಗಿತ್ತು. ಅವರ ವಿದ್ಯಾರ್ಥಿಯಾಗಿದ್ದು ಈಚೆಗಷ್ಟೆ ದಿವಂಗತರಾದ ಪ್ರೊ. ಎಸ್. ಪಿ. ವಾಳ್ವೇಕರ ಅವರು ಹೇಳುವಂತೆ 'ಕಾಲೇಜಿಗೆ ಯಾರಾದರೂ ಹೊಸ ಅಧ್ಯಾಪಕರಾಗಿ ಬಂದರೆಂದರೆ ಪ್ರೊ. ಬಾಗಿ ಅವರ ಮೊದಲ ಗೆಳೆಯ ಮತ್ತು ಮಾರ್ಗದರ್ಶಿಯಾಗಿರುತ್ತಿದ್ದರು. ಅವರು ಸರಿಯಾದ ಸಲಹೆಗಳನ್ನೇ ಕೊಡುತ್ತಿದ್ದರು'.

ಅವರಲ್ಲಿ ನಿಷ್ಕಲ್ಮಷವಾದ ಸೌಂದರ್ಯ ಪ್ರೇಮವಿತ್ತು. ಸುಂದರವಾದ ವ್ಯಕ್ತಿ, ವಸ್ತು, ಹೂ, ತರಕಾರಿಗಳನ್ನು ಕೂಡ ಅವರು ತುಂಬ ಪ್ರಶಂಶಿಸುತ್ತಿದ್ದರು.

ದಿನನಿತ್ಯ ಬೆಳಿಗ್ಗೆ, ಸಾಯಂಕಾಲ ತಪ್ಪದೆ ವಾಕಿಂಗ್ ಹೋಗುತ್ತಿದ್ದರು. ಚಹಾ, ಕಾಫಿ, ಕುಡಿಯುತ್ತಿದ್ದುದು ತುಂಬ ಅಪರೂಪ. ವಾಕಿಂಗ್ ಮುಗಿಸಿ ಬಂದವರು ಯೋಗಾಭ್ಯಾಸ ಮಾಡುತ್ತಿದ್ದರು. ಮಗ ಅಶೋಕರಿಗೆ ಅವರೇ ಯೋಗ ಹೇಳಿಕೊಟ್ಟರು.

ರಾತ್ರಿ ಬಹಳ ಹೊತ್ತಿರವರೆಗೂ ಓದುತ್ತಿದ್ದರು ಅವರು. ಇನ್ನು ಓದುವುದು ಸಾಧ್ಯವಿಲ್ಲವೆನ್ನುವಷ್ಟು ವಯಸ್ಸಾದಾಗ ಅವರು ತಮ್ಮ ಇಡೀ ಗ್ರಂಥರಾಶಿಯನ್ನು ಕುಂಭೋಜದ ಬಾಹುಬಲಿ ಆಶ್ರಮಕ್ಕೆ 'ಶಾಸ್ತ್ರದಾನ'ವಾಗಿ ಕೊಟ್ಟುಬಿಟ್ಟರು. (ಜೈನ ಗೃಹಸ್ಥನು ನಾಲ್ಕು ಬಗೆಯ ದಾನಗಳನ್ನು ಯಥಾಶಕ್ತಿ ಮಾಡಬೇಕೆಂಬುದು ನಿಯಮ. ಈ ಚತುರ್ವಿಧ ಧಾನಗಳೆಂದರೆ ಆಹಾರ, ಅಭಯ, ಭೇಷಜ (ಔಷಧಿ)

ಹಾಗೂ ಶಾಸ್ತ್ರ) ಪ್ರೊ. ಬಾಗಿಯವರು ತೀರಿಕೊಂಡ ಬಳಿಕ ಒಮ್ಮೆ ಪ್ರಯಾಣಮಾರ್ಗದಲ್ಲಿ ಪ್ರೊ. ಸ. ಸ. ಮಾಳವಾಡ ದಂಪತಿಗಳು ಈ ಬಾಹುಬಲಿ ಆಶ್ರಮಕ್ಕೆ ಭೇಟಿಕೊಟ್ಟರು. 'ಅಲ್ಲಿ ಬಾಗಿಯವರು ನೂರಾರು ಗ್ರಂಥಗಳನ್ನು ದಾನಮಾಡಿರುವುದನ್ನು ನೋಡಿ ಅಭಿಮಾನಪಟ್ಟೆವು' ಎಂದು ಶ್ರೀಮತಿ ಮಾಳವಾಡರು ನೆನಪಿಸಿಕೊಳ್ಳುತ್ತಾರೆ.

ಪ್ರೊ. ಬಾಗಿಯವರ ತಾಯಿ ಸಾವಿತ್ರಿಬಾಯಿಯವರು ತುಂಬ ಧಾರ್ಮಿಕ ಮನೋಭಾವದ ಮಹಿಳೆಯಾಗಿದ್ದರಂತೆ ಅನೇಕ ವ್ರತೋಪವಾಸಗಳನ್ನು ಅವರು ಆಚರಿಸುತ್ತಿದ್ದರು. ಈ ತಾಯಿಯ ಬಗ್ಗೆ ಪ್ರೊ. ಬಾಗಿಯವರಿಗೆ ಅತೀವ ಪ್ರೀತಿ ಗೌರವಗಳಿದ್ದವು. ತಮ್ಮ ಒಂದು ಗಣಿತಕೃತಿಯನ್ನು ಈ ತಾಯಿಯ ನೆನಪಿಗೆ ಅರ್ಪಣೆ ಮಾಡುರುವುದಲ್ಲದೆ ತಮ್ಮ ಹಿರಿಯ ಮೊಮ್ಮಗಳಿಗೆ 'ಸಾವಿತ್ರಿ' ಎಂದೇ ಹೆಸರಿಟ್ಟರು.

ಅವರ ಅನೇಕ ವಿದ್ಯಾರ್ಥಿಗಳು ದೊಡ್ಡ ಮನುಷ್ಯರಾಗಿ ಬೆಳೆದರು. ಉನ್ನತೋನ್ನತ ಪದವಿಗಳನ್ನು ಅಲಂಕರಿಸಿದರು–ಡಾ. ಡಿ. ಸಿ.ಪಾವಟೆ, ಡಾ.ಎಸ್.ಸಿ. ನಂದಿಮಠ, ಜಿಲ್ಲಾಧಿಕಾರಿಯಾಗಿ ನಿವೃತ್ತರಾದ ಶೇಖ್, ಈ ಪುಸ್ತಿಕೆಯಲ್ಲಿ ಉಲ್ಲೇಖಿತರಾಗಿರುವ ಅನೇಕ ಪ್ರಾಧ್ಯಾಪಕರು– ಇತ್ಯಾದಿ. ಅದೇ ರೀತಿ ಭಾರತಾದ್ಯಂತ ಉನ್ನತ ಸ್ಥಾನಗಳಲ್ಲಿದ್ದ ಅನೇಕರ ಸಂಪರ್ಕ ಅವರಿಗಿತ್ತು. ಪ್ರೊ. ವಿ.ಕೆ. ಆರ್. ವಿ. ರಾವ್ (ಖ್ಯಾತ ಅರ್ಥಶಾಸ್ತ್ರಜ್ಞ ಹಾಗೂ ಒಂದು ಕಾಲಕ್ಕೆ ಭಾರತದ ಶಿಕ್ಷಣ ಸಚಿವ), ಪ್ರೊ. ಎ.ಎನ್. ಉಪಾಧ್ಯೆ, ಸಾಂಗ್ಲಿಯ ಕೆ.ಎ. ಚೌಗಲೆ, ಕವಿ ಬೇಂದ್ರೆ, ಮಾಸ್ತಿಯವರು ವಿ.ಕೃ. ಗೋಕಾಕ್, ಜೈನ ಸಮಾಜಶಾಸ್ತ್ರಜ್ಞ ಪ್ರೊ. ವಿಲಾಸಸಂಘ್ವೆ, ಕೆ.ಬಿ. ಜಿನರಾಜ ಹೆಗ್ಗಡೆ, ಪ್ರೊ. ಟಿ. ಜಿ. ಕಲಘಟಗಿ, ಪ್ರೊ. ಕೆ. ಜೆ. ಷಾ. ಕರ್ಮವೀರ ಭಾವುರಾವ ಪಾಟೀಲ, ನ್ಯಾಯಾಧೀಶರಾಗಿದ್ದ ಪಿ.ಎಚ್. ಗುಂಜಾಳ, ಇತ್ಯಾದಿ. ಈ ಯಾವ ಸಂಪರ್ಕವನ್ನೂ ಅವರು ಸ್ವಂತ ಲಾಭಕ್ಕಾಗಿ ಬಳಸಿಕೊಳ್ಳಲಿಲ್ಲ. ಅಂಥ ಯೋಜನೆ ಎಂದೂ ಅವರಲ್ಲಿ ಸುಳಿಯಲಿಲ್ಲ.

ಅವರು ಎಲ್ಲರಿಗೂ ಕೊಟ್ಟಿದ್ದು –ಪ್ರೀತಿ, ಧೈರ್ಯ ಮತ್ತು ಅವಕಾಶಗಳನ್ನು. ತಮ್ಮ ಕಿರಿಯ ಮಗ ಅಶೋಕ ಇನ್ನೂ ಎಂಜಿನಿಯರಿಂಗ್ ಕಲಿಯುತ್ತಿದ್ದಾಗ ಪದೇ ಪದೇ ಅವನಿಗೆ ಹೇಳಿದರು. "ಅಶೋಕ, ನೀನು ಜಾಣ, ಒಳ್ಳೆಯವ. ನಿನ್ನ ಕಾಲ ಮೇಲೆ ಸ್ವತಃ ನೀನು ನಿಲ್ಲಬಲ್ಲೆ. ನಿನಗೆ ಇನ್ನೊಬ್ಬರ ಹಣದ ಅಗತ್ಯವಿಲ್ಲ"– ಅವರ ಈ ಮುಂಗಾಣ್ಕೆ ಸತ್ಯವೆಂದು ಕಾಲವು ಅನಂತರ ಸಾಬೀತು ಪಡಿಸಿದೆ. ಎಂಜಿನಿಯರಿಂಗ್ ಪದವಿ ಪಡೆದು ಮುಂಬಯಿಯ ಖ್ಯಾತ ವಾಲ್‌ಚಂದ್ ಗ್ರೂಪ್ ಕಂಪೆನಿ ಸೇರಿದ ಅಶೋಕ ನಂತರ ಸಕ್ಕರೆ ತಂತ್ರಜ್ಞಾನದಲ್ಲಿ ವಿಶೇಷ ತರಬೇತಿಗೆಂದು ಆ ಕಂಪೆನಿಯಿಂದಲೇ ಯುರೋಪಿಗೆ ಕಳಿಸಲ್ಪಟ್ಟು ಹಾಗೆ ಹೋಗಿ ಬಂದರು.

ತಮ್ಮ ಸೊಸೆಯಂದಿರನ್ನು ಅವರು ಮಕ್ಕಳಿಗಿಂತ ಹೆಚ್ಚಾಗಿ ಪ್ರೀತಿಸಿದರು. ಜೀವನದ ಕೊನೆಯ ಕೆಲವು ವರ್ಷಗಳಲ್ಲಿ ಅನ್ಯರು ಅವರ ಸೇವೆ ಮಾಡುವ ಸ್ಥಿತಿಯಾದಗಿತ್ತು. ಅದನ್ನು ನೆನೆದು ಅವರ ಕೊನೆಸಸೊಸೆ ನಂದಿನಿ ತಾವೇ ಕನ್ನಡದಲ್ಲಿ ಬರೆದ ಟಿಪ್ಪಣಿಯೊಂದರಲ್ಲಿ ಹೇಳುತ್ತಾರೆ– "ಅವರು ನಮಗೆ ಯಾವಾಗಲೂ ಪ್ರೀತಿಯನ್ನು ಕೊಡುತ್ತಾ ಇದ್ದರು. ಅದಕ್ಕೆ ಅವರ ಪರಿಚಾರತ್ವ ಮಾಡಲಿಕ್ಕೆ ನಮಗೆ ಎಂದೂ ಬೇಜಾರು ಆಗಲಿಲ್ಲಾ."

ಆದರ್ಶ ಶ್ರಾವಕ

ಪ್ರೊ. ಬಿ.ಬಿ. ಬಾಗಿಯವರು ನೂರಕ್ಕೆ ನೂರು ಪಾಲು ಒಬ್ಬ ಆದರ್ಶ ಶ್ರಾವಕರಾಗಿದ್ದರು. 'ರತ್ನಕರಂಡ ಶ್ರಾವಕಾಚಾರ' ವೆಂಬ ತಮ್ಮ ಕೃತಿಯಲ್ಲಿ ಸ್ವಾಮಿ ಸಮಂತಭದ್ರಾಚಾರ್ಯರು ಶ್ರಾವಕನ ಕರ್ತವ್ಯಗಳೇನೆಂಬುದನ್ನು ಪ್ರಾರಂಭದ ಶ್ಲೋಕದಲ್ಲೇ ಹೇಳುತ್ತಾರೆ. ಹೀಗೆ–

"ದೇವಪೂಜಾ ಗುರುಪಾಸ್ತಿ ಸ್ವಾಧ್ಯಾಯ ಸಂಯಮಸ್ತಪ:
ದಾನಂಚೇತಿ ಗೃಹಸ್ಥಾನಾಂ ಷಟ್ಕರ್ಮಾಣಿ ದಿನೇದಿನೇ"

'ದೇವರನ್ನು ಪೂಜಿಸುವುದು, ಗುರುಗಳ ಸೇವೆ ಮಾಡುವುದು. ಶಾಸ್ತ್ರಾಧ್ಯಯನ, ಸಂಯಮ, ತಪ, ಹಾಗೂ ದಾನ–ಇವು ಆರು ಗೃಹಸ್ಥನು ದಿನವೂ ತ್ರಿಕಾಲ 'ಸಾಮಾಯಿಕ ಪಾಠ' ವೆಂಬ ೩೨ ಶ್ಲೋಕಗಳ ಪಠಣ, ಜಪ ಮಾಡುತ್ತಿದ್ದರು. ಅಷ್ಟಮೀ ಚತುರ್ದಶಿಗಳಂದು ಮೌನವ್ರತಧಾರಣ ಮಾಡುತ್ತಿದ್ದರು (ನಿವೃತ್ತಿಯ ನಂತರ). ಕೋಪಗೊಳ್ಳುವುದು– ಇಲ್ಲವೇ ಇಲ್ಲವೆನ್ನುವಷ್ಟು ಕಡಮೆ. ಎಲ್ಲರೊಡನೆ ಹಿತಮಿತವಾದ ವರ್ತನೆ!

'ಸಾಮಾಯಿಕ ಪಾಠ' ವು ವ್ಯಕ್ತಿಯ ವರ್ತನೆ ಹೇಗಿರಬೇಕೆಂಬುದನ್ನು ಹೇಳುತ್ತಾ 'ಇಂಥ ವರ್ತನೆ ನನ್ನದಾಗಿರಲಿ, ಇದಕ್ಕೆ ಮಿರಿ ನಾನು ನಡೆದಿದ್ದರೆ ಆ ನನ್ನ ವರ್ತನೆಯು ಕ್ಷಮಿಸಲ್ಪಡಲಿ' ಎಂದು ಪ್ರಾರ್ಥಿಸುತ್ತದೆ. ಆ ಸಾಮಾಯಿಕ ಪಾಠದ ಮೊದಲು ಶ್ಲೋಕವಿದು–ಇದನ್ನು ಪ್ರೊ. ಬಾಗಿಯವರು ತಮ್ಮ ಎಲ್ಲ ಪುಸ್ತಕಗಳ ಪ್ರಾರಂಭದಲ್ಲಿ ಮುದ್ರಿಸಿದ್ದಾರೆ:

ಸತ್ವೇಷು ಮೈತ್ರೀಂ ಗುಣಿಷುಪ್ರಮೋದಂ
ಕ್ಲಿಷ್ಟೇಷು ಜೀವೇಷು ಕೃಪಾಪರತ್ವಂ
ಮಾಧ್ಯಸ್ಥಭಾವಂ ವಿಪರೀತ ವೃತ್ತೌ
ಸದಾಮಮಾತ್ಮಾ ವಿಧದಾತು ದೇವ ॥

'ಓ ದೇವನೆ, ಸತ್ವವುಳ್ಳವನಲ್ಲಿ ಸ್ನೇಹವೂ, ಗುಣವುಳ್ಳವನನ್ನು ನೋಡಿದಾಗ ಸಂತೋಷವೂ ಕಷ್ಟದಲ್ಲಿರುವ ಜೀವಿಗಳನ್ನು ನೋಡಿದಾಗ ದಯಾಭಾವನೆಯೂ, ಅತಿರೇಕದಿಂದ ವರ್ತಿಸುವವರಲ್ಲಿ ಮಧ್ಯಸ್ಥ ಭಾವನೆಯನ್ನೂ ನನ್ನ ಆತ್ಮವು ಯಾವಾಗಲೂ ಹೊಂದಿರುವಂತೆ ಅನುಗ್ರಹಿಸು'

–ಇದು ಪ್ರೊ. ಬಾಗಿಯವರ ಅಂತರಂಗದ ಪ್ರಾರ್ಥನೆಯಾಗಿತ್ತು. ಬಹಿರಂಗದ ನಡವಳಿಕೆಯಾಗಿತ್ತು. ಇಂಥ ಆದರ್ಶ ನಡವಳಿಕೆ, ಅಂತರಂಗ ಬಹಿರಂಗಗಳೊಂದಾದ ಬದುಕಿನಿಂದಾಗಿ ಅವರು ಆದರ್ಶ

ಜೈನರೆಸಿದ್ದರು. ಅವರ ಶಿಷ್ಯೆ ಡಾ. ವತ್ಸಲಾ ಮುಖರ್ಜಿ, ಅವರ ಬದುಕಿನ ರೀತಿಯನ್ನು ನಾಡಿ ಹಿಡಿದು ಹೇಳಿದ ಹಾಗೆ ಇ ಕೆಲವೇ ಮಾತುಗಳಲ್ಲಿ ಸಮರ್ಪಕವಾಗಿ ಅಭಿವ್ಯಕ್ತಿಸಿದ್ದಾರೆ–

"ಜೈನಧರ್ಮಿಗಳಾದ ಪ್ರೊ. ಬಾಗಿ ಅವರು ಹೆಸರಿಗಷ್ಟೆ ಜೈನರಾಗಿರದೆ ಕಾಯ ಮನೋವಾಕ್ಕುಗಳಿಂದ ಅತಿ ನಿಷ್ಠಾವಂತ ಜೈನರಾಗಿದ್ದರು. ಜೈನಧರ್ಮದ ನೈತಿಕತೆ ಅವರ ದೈನಂದಿನ ಪ್ರತಿಕಾರ್ಯದಲ್ಲಿಯೂ ಹಾಸು ಹೊಕ್ಕಾಗಿ ಸೇರಿತ್ತು. ಪ್ರತಿದಿನದ ವಿಧಿಗಳಲ್ಲಿಯೂ ಜೈನ ಧರ್ಮದ ತತ್ವಗಳನ್ನು ಬಲುನಿಷ್ಠೆಯಿಂದ ಅವರ ಮನೆಯಲ್ಲಿ ಪಾಸಿಸಲಾಗುತ್ತಿತ್ತು. ಸೂರ್ಯ ಮುಳುಗುವುದರೊಳಗಾಗಿ ಹೋಸಭೋಜನವೂ ಅವರ ಮನೆಯಲ್ಲಿ ನಿತ್ಯದ ಮಾತಾಗಿತ್ತು."

ಹೀಗೆ, ಪ್ರಾಚೀನದಲ್ಲಿ ಬೇರಿಳಿಸಿ ಅರ್ವಾಚೀನದ ಹೂ ತಳಿರುಗಳನ್ನು ತಾಳಿ, ಹಳೆಬೇರು ಹೊಸಚಿಗುರಿನೊಂದಿಗೆ ನೆಲದಿಂದ ನಭಕ್ಕೆದ್ದುನಿಂತ ವಿಶಾಲ ವೃಕ್ಷದಂತಿತ್ತು. ಪ್ರೊ. ಬಾಗಿಯವರ ಬದುಕು. ಆ ವೃಕ್ಷದಾಶ್ರಯದಲ್ಲಿ ಅನೇಕರು ದಣಿವಾರಿಸಿಕೊಂಡು ಮುನ್ನಡೆದರು. ಹಲವರು ಅದರ ಕೊಂಬೆಗಳನ್ನೇರಿ ಸಲಿಗೆಯಿಂದ ಮರಕೋತಿಯಾಟ ಆಡಿದರು. ಅದರ ಹೂ ಹಣ್ಣುಗಳನ್ನು ತಿಂದು ಜೀವಪುಷ್ಟಿಗೊಳಿಸಿಕೊಂಡರು ಅನೇಕರು. ಈ ವೃಕ್ಷ ಎಲ್ಲವನ್ನೂ ಸಹಿಸಿತು. ಆನಂದಿಸಿತು.

ಪ್ರೊ. ಬಾಗಿ ತಮ್ಮ ಬದುಕಿನ ಒಂದೊಂದು ಅವಸ್ಥೆಯಲ್ಲಿ ಒಂದೆರಡೇ ಕೆಲಸಗಳನ್ನೂ ಪ್ರದಾನವಾಗಿ ಕೈಗೆತ್ತಿಕೊಂಡು ಮುಗಿಸಿದಂತೆ ಕಾಣುತ್ತದೆ. ತಮ್ಮ ವಿದ್ಯಾರ್ಥಿದೆಸೆಯಲ್ಲಿ ಕೇವಲ ಅಧ್ಯಯನದತ್ತ ಅವರ ಗಮನವಿತ್ತು. ಸೇನಾವಧಿಯುದ್ದಕ್ಕೂ ಅಧ್ಯಯನ, ಅಧ್ಯಾಪನ ವೃತ್ತಿಗೆ ಸಂಬಂಧಿಸಿದಂತೆ ಗಣಿತ ಗ್ರಂಥರಚನೆ– ಇವುಗಳಲ್ಲೇ ಮುಳುಗಿದ್ದರು. ಇವುಗಳ ಜೊತೆಜೊತೆಗೇ ಲೌಕಿಕದಲ್ಲಿ ತಾವು ನಿರ್ವಹಿಸಬೇಕಾದ ಸಾಂಸಾರಿಕ ಕಾರ್ಯಗಳನ್ನು ಜೋಕೆ ಜವಾಬ್ದಾರಿಗಳಿಂದ ನಿರ್ವಹಿಸಿದರು. ಬೇರೆ ಯಾವುದೇ ಸಮಾಕಿಕ ಕಾರ್ಯಗಳಲ್ಲಿ ಸಂಘಟನೆಗಳಲ್ಲಿ ಅವರು ತೊಡಗಿಕೊಳ್ಳಲಿಲ್ಲ. ಹಾಗೆ ತೊಡಗಿದ್ದರೆ ಅವರ 'ಗಣಿತ ತಪಸ್ಸಿ'ಗೆ ಭಂಗವಾಗುತ್ತಿತ್ತು. ನಿವೃತ್ತಿಯ ನಂತರ ಅವರು ಆತ್ಮಸಂತೋಷಕ್ಕಗಿ ಬೋಧ ಕಾರ್ಯದಲ್ಲಿ ತೊಡಗಿಕೊಂಡಿದ್ದಂತೆ ಹೆಚ್ಚು ಹೆಚ್ಚಾಗಿ ಸಾಮಾಜಿಕ ಕಾರ್ಯಗಳಲ್ಲಿ ತೊಡಗಿಕೊಂಡರು. ಕೃಷಿಯನ್ನು ಒಬ್ಬ ವಿದ್ಯಾರ್ಥಿಯಂತೆ ಕಂಡರು. ಅದರಲ್ಲೂ ಸೈ ಎನ್ನಿಸಿಕೊಂಡರು. ನಿವೃತ್ತಿಯ ನಂತರದ ದಿನಗಳಲ್ಲಿ ಇತರರ ಕಷ್ಟ ಸುಖಗಳನ್ನು ವಿಚಾರಿಸಿ ಅದಕ್ಕೆ ಪರಿಹಾರ ದೊರಕಿಸಿ ಕೊಡುವುದಕ್ಕಿಂತ ಮುಖ್ಯವಾದ ಇನ್ನೊಂದು ಕಾಳಜಿಯೇ ಇದ್ದಂತಿರಲಿಲ್ಲ. ಜೈನರ ಪಂಚಶೀಲಗಳು ಬಾಗಿ ದಂಪತಿಗಳ ಬದುಕಲ್ಲಿ ತೀರ ಸಹಜ ರೀತಿಯಲ್ಲಿ ನೇಯ್ದುಕೊಂಡಿದ್ದವು.

ಪ್ರತಿದಿನ ಸಂಜೆ ಊಟದ ನಂತರ ಮನೆಯ ಎಲ್ಲರನ್ನೂ ಸಮೀಪ ಕೂರಿಸಿಕೊಂಡು 'ಸಾಮಾಯಿಕ' ಮಾಡುತ್ತಿದ್ದರು.

ಕರ್ನಾಟಕ ಕಾಲೇಜಿಗಷ್ಟೇ ಏನು, ಧಾರವಾಡದ ಬುದ್ಧಿಜೀವಿ ವಲಯದಲ್ಲಿ ಪ್ರೊ. ಬಾಗಿಯವರೊಂದು ನಿತ್ಯಹರಿದ್ವರ್ಣದ ನೆನಪಾಗಿ ಉಳಿದಿರುತ್ತಾರೆ. ಕರ್ನಾಟಕದ ಜೈನ ಸಮಾಜಕ್ಕಂತೂ ಪ್ರೊ. ಬಿ.ಬಿ. ಬಾಗಿ ಒಂದು ಹೆಮ್ಮೆ– ಪ್ರೊ. ಆ.ನೇ. ಉಪಾಧ್ಯೆಯವರಂತೆ.

ಪ್ರೊ. ಬಾಗಿಯವರ ಜೀವನಶ್ರದ್ಧೆ ತ್ರಿಕಾಲಾಬಾಧಿತ ತತ್ವಗಳಿಂದ ಪ್ರೇರಿತವಾದದ್ದು. ವೈಜ್ಞಾನಿಕತೆಯ ನಿಕಷದಲ್ಲಿ ಗೆದ್ದುಬಂದದ್ದು–'ಮಾನವಜಾತಿ ತಾನೊಂದೆ ವಲಂ' ಎಂಬ ಪಂಪನ ಉಕ್ತಿ, ಅವರ ಜೀವನ ಜೀವನಸೂತ್ರವಾಗಿದ್ದರೆ, ಸತ್ಯ ಅಹಿಂಸೆ ಸರಳತೆಗಳು ಅವರ ಜೀವನಮಾರ್ಗವಾಗಿ ಮುಪ್ಪುರಿಗೊಂಡಿದ್ದವು.

ಅವರಲ್ಲಿ ಒಳ್ಳೆಯ ಹಾಸ್ಯ ಪಟುತ್ವವಿತ್ತು. ಶಾಕುಂತಲ, ರಘುವಂಶಗಳಿಂದ ಪದ್ಯಗಳನ್ನು ಉಲ್ಲೇಖಿಸುತ್ತಿದ್ದರು. ತಮಗಿಂತ ತಮ್ಮ ಪತಿ ತುಸು ಎತ್ತರವಿದ್ದಿದ್ದರ ಬಗ್ಗೆ ಅವರು– "ಇಲ್ಲ, ಆಕಿ ಮದುವಿ ಆದಮ್ಯಾಲ ಬೆಳದಾಳ" ಎನ್ನುತ್ತಿದ್ದರು.

'ಆದರ್ಶವಾಗಿ ಬದುಕುವುದು ಸಾಧ್ಯವಿಲ್ಲ' ಎಂದು ಹೇಳುವವರೇ ಎಲ್ಲ ಕಾಲಗಳಲ್ಲೂ ಬಹುಸಂಖ್ಯಾತರು. ಆ ಬಗ್ಗೆ ಏನನ್ನೂ ಹೇಳದೆಯೇ ಬದುಕಿ ತೋರಿಸುವವರು ಎಲ್ಲ ಕಾಲಗಳಲ್ಲೂ ಅಲ್ಪಸಂಖ್ಯಾತರು.

ಪ್ರೊ. ಬಾಗಿಯವರು ಇಂಥ 'ಅಲ್ಪಸಂಖ್ಯಾತ ವರ್ಗ'ಕ್ಕೆ ಸೇರಿದವರು.

೮. ದೀಪ ಆರಿತು, ಆದರೆ...

ಸಂತೃಪ್ತಿಯಿಂದ ತುಂಬು ಜೀವನವನ್ನು ಬದುಕುತ್ತಾ ಬಂದಿದ್ದರು ಪ್ರೊ. ಬಗಿಯವರು. ಒಬ್ಬ ಮನುಷ್ಯ ನೆಮ್ಮದಿಯಿಂದಿರಲು ಏನೇನು ಬೇಕೋ ಅದೆಲ್ಲವೂ ಅವರಿಗೆ ದೊರೆತಿತ್ತು. ಬೆಚ್ಚನೆಯ ಮನೆ, ವೆಚ್ಚಕ್ಕೆ ಹೊನ್ನು, ಇಚ್ಛೆಯರಿತು ನಡೆದ ಸತಿ, ಸೀಲವಂತರೂ ಗೌರವಸ್ಥರೂ ಆದ ದುಡಿಮೆಗಾರ ಮಕ್ಕಳು, ವಿನಯವಂತ ಸೊಸೆಯವರು, ನೇರ್ಪಾಥಿದ್ದ ಮಗಳ ಸಂಸಾರ, ನಗುನಗುವ್ ಮೊಮ್ಮಕ್ಕಳು. ವಿದ್ವತ್ ಲೋಕದಲ್ಲಿ ಗೌರವ, ಊರಲ್ಲಿ ಮನ್ನೆಣೆ. . .ಇತ್ಯಾದಿ. ಪ್ರೊ. ಬಾಗಿಯವರು ಪೂರ್ವಪುಣ್ಯದಿಂದ ಪಡೆದದ್ದನ್ನೂ ಇಹಜನ್ಮದಲ್ಲಿ ದುಡಿದ್ದದನ್ನೂ ನೆಮ್ಮದಿಯಿಂದ ಅನುಭವಿಸುತ್ತಿದ್ದರು. 'ಒಬ್ಬ ಮನುಷ್ಯನಿಗೆ ಇದಕ್ಕಿಂತ ಹೆಚ್ಚೇನೂ ಬೇಕಿಲ್ಲ' ಎಂಬ ಸ್ಪಷ್ಟ ಅರಿವೂ ಅವರಿಗಿತ್ತು. 'ತಮಗೆ ಭಗವಂತ ಕೊಟ್ಟದ್ದು ಎಡಗೈಗೆ ಗೊತ್ತಗದಂತೆ ದಾನ ಮಾಡುತ್ತಿದ್ದರು. 'ಎಲವೋ' ಎಂದು ಯಾರಿಗೂ ಅನ್ನದೆ 'ಅಯ್ಯಾ' ಎನ್ನುತ್ತಲೇ ಬಾಳಿದರು. ಶ್ರದ್ಧಾಭಕ್ತಿಗಳಿಂದ ಕೂಡಿದ ಪೂಜೆ, ಪ್ರಾರ್ಥನೆಗಳ ಮೂಲಕ, ವಿದ್ಯಾದಾನದ ಮೂಲಕ ಸಮಾಜಸೇವೆಯ ಮೂಲಕ, ನಿಷ್ಕಲಂಕ ನಡವಳಿಕೆಯ ಮೂಲಕ, ಒಟ್ಟಾರೆ ಸಮ್ಯಕ್ತ್ವಪೂರ್ಣ ಬದುಕಿನ ಮೂಲಕ ಇಹಜನ್ಮದಲ್ಲೂ ಸಾಕಷ್ಟು ಪುಣ್ಯವನ್ನೂ ಗಳಿಸಿಕೊಂಡರು. ಪುಣ್ಯವೆನ್ನುವುದು ಇರುವುದೇ ನಿಜವಾದರೆ ಇಂಥವರಿಗಲ್ಲದೆ ಇನ್ನಾರ ಲೆಖ್ಖಕ್ಕೆ ಅದು ಜಮೆಯಾಗಬೇಕು?

ಸರಳ ಆಹಾರ ಪದ್ಧತಿ, ದೀರ್ಘವಾದ ವಾಕಿಂಗ್, ನಿರುಮ್ಮಳವಾದ ಮನಸ್ಸು–ಇವುಗಳಿಂದಾಗಿ ಪ್ರೊ. ಬಾಗಿಯವರ ಆರೋಗ್ಯ ಇಳಿವಯಸ್ಸಿನಲ್ಲೂ ಚೆನ್ನಾಗಿಯೇ ಇತ್ತು. 'ಜೈನರ ಪಂಚಶೀಲಗಳನ್ನೂ ನಿತ್ಯಜೀವನದಲ್ಲಿ ಅವಳಡಿಸಿಕೊಂಡಿದ್ದರು ಬಾಗಿ ದಂಪತಿಗಳು' ಎನ್ನುತ್ತಾರೆ ಶಾಂತದೇವಿ ಮಾಳವಾಡರು.

ಇಂಥ 'ಬಾಗಿ ಅಜ್ಜಾ' ಅವರ ಮೆದುಳಿನ ಕೋಶಗಳು ತುಂಬ ಬಳಲಿ ಹೈರಾಣಾಗಿದ್ದವೆಂದು ಕಾಣುತ್ತದೆ. ೧೯೭೩ ರಿಂದ ಅವರ ನೆನಪಿನ ಶಕ್ತಿ ಕ್ಷೀಣಿಸತೊಡಗಿತ್ತು. ಅದನ್ನು **Amnesia** ಎಂದು ಆಗ ವೈದ್ಯರು ಗುರುತಿಸಿದರು. ಆದರೆ ಈಚಿನ ವೈದ್ಯಕೀಯ ರಂಗದ ಶೋಧಗಳು ಅದು **Amnesia** ಆಗಿರಲಾರದು, ಬದಲಾಗಿ **Aizheimer's disease** ಆಗಿರಬಹುದು ಎಂದುಕೊಳ್ಳುವಂತೆ ಮಾಡುತ್ತದೆ. ಆಮ್ನೀಸಿಯಾಕ್ಕೆ ಚಿಣತ್ಸೆಯುಂಟು. ಆದರೆ **Aizheimer's disease** ಗೆ ಚಿಕಿತ್ಸೆ ಇಲ್ಲ. ಸ್ಮರಣಶಕ್ತಿ ಕ್ರಮೇಣ ಕಡಿಮೆಯಾಗುವುದು, ವ್ಯಕ್ತಿಗಳ ಗುರುತು ಹತ್ತದಿರುವುದು, ಯಾನು ಯಾರು ಎಲ್ಲಿದ್ದೆನೆ ಎಂಬ ಅರಿವೂ ಮರೆಯಾಗಿ ಸ್ವಂತ ಸ್ವಚ್ಛತೆಯ ಪ್ರಜ್ಞೆಯೂ ಇಲ್ಲದಂತಾಗುವುದು ಇದರ ಲಕ್ಷಣಗಳು. ಈ ಲಕ್ಷಣಗಳು ಕ್ರಮೇಣ ಬೆಳೆಯುತ್ತವೆ. ಆ ಹಂತದಲ್ಲಿ ವ್ಯಕ್ತಿ ಮಗುವಿನಂತಾಗಿಬಿಡುತ್ತಾನೆ. ಇತರರು ಏನು ಮಾಡುತ್ತಾರೋ ಅದನ್ನು ಮಾಡಿಸಿಕೊಳ್ಳುತ್ತಾನೆ. ಯಾರೂ ಏನೂ ಮಾಡದಿದ್ದರೆ ತಾನೂ ಸುಮ್ಮನಿದ್ದು ಬಿಡುತ್ತಾನೆ. ಈಗ ೧೦ ವರ್ಷಗಳಿಂದ ಅಂತಾರಾಷ್ಟ್ರೀಯ ವೈದ್ಯಕೀಯ ರಂಗದಲ್ಲಿ ಈ ರೋಗದ ಬಗ್ಗೆ ಒಂದಷ್ಟು ಚರ್ಚೆಯಾಗುತ್ತಿದೆ. ಒಂದಷ್ಟು ವಿಷಯ ತಿಳಿದಿದೆ. ಆದರೆ ಚಿಕಿತ್ಸಾ ಮಾರ್ಗಗಳು ಇನ್ನೂ ಹೊಳೆದಿಲ್ಲ. ಇಪ್ಪತ್ತೈದು ವರ್ಷಗಳ ಹಿಂದೆ **Aizhimer's disease** ಎಂಬ ಹೆಸರೇ ವೈದ್ಯರಿಗೆ ಅಷ್ಟಾಗಿ ಪರಿಚಿತವಾಗಿರಲಿಲ್ಲ. ಆಗ ಇಂಥಾದ್ದನ್ನೂ ಆಮ್ನಿಸಿಯಾ ಎಂದೇ ಗುರುತಿಸಲಾಗುತ್ತಿತ್ತು.

ಹೆಸರು ಏನಾದರೂ ಇರಲಿ, ಆಗಿದ್ದಂತೂ ಅದೇ– ಸ್ಮರಣಹೀನತೆ, ಅದರಿಂದಾದ ಪರಾವಲಂಬನೆ. ೧೯೭೩ ರನಂತರ ಈ ಸ್ಮರಣಹೀನತೆ ಆರಂಭವಾಗಿ ಕ್ರಮೇಣ ಹೆಚ್ಚಾಯಿತು–ಇದೇ ಸ್ಥಿತಿಯಲ್ಲೇ ಐದು ವರ್ಷಗಳು ಕಳೆದವು. ೧೯೭೮ ರ ಮೇ ತಿಂಗಳ ಒಂದು ಸಂಜೆ–ಸಕಲ ಜೀವಗಳಿಗೂ ಸದಾ ಲೇಸನೇ ಬಯಸುತ್ತಿದ್ದ ಬಾಗಿ ಅಜ್ಜಾ ತಮ್ಮ ಬಂಗಲೆಯೊಳಗಿನ ಹಾಲ್‌ನಲ್ಲಿ ಕುರ್ಚಿಯೊಂದರಲ್ಲಿ ಕುಳಿತಿದ್ದರು. . . ಇದಕ್ಕಿದಂತೆ ಮಾತು ಬಿದ್ದುಹೋಯಿತು. ಅಲ್ಲಿಂದ ಮುಂದೆ ಕೇವಲ ಮನೆಯೊಳಗೆ! ತೋಟದಲ್ಲಿ ಸುತ್ತಾಡಲೂ ಸಾಧ್ಯವಾಗುತ್ತಿರಲಿಲ್ಲ. ಮೂರು ತಿಂಗಳ ಕಾಲ ಹೀಗೆ ಕಳೆಯಿತು. ಆಗಸ್ಟ್‌ನಿಂದ ಅವರಿಗೆ ಮನೆಯಲ್ಲಿ ಸ್ವತಂತ್ರವಾಗಿ ಓಡಾಡಲೂ ಸಧ್ಯವಿಲ್ಲದಂತಾಯಿತು. ಅಸ್ಪಷ್ಟವಾಗಿ ಮಾತುಗಳು ಕಷ್ಟಪಟ್ಟು ಹೋರಡುತ್ತಿದ್ದವು. ಪತ್ನಿ ಕುಸುಮಕ್ಕ, ಮಗ ಅಶೋಕ, ಸೊಸೆ ನಂದಿನಿ ಅವರ ಸೇವೆ ಮಾಡುತ್ತಿದ್ದರು. ಅವರಿಗೆ ದಿನವೂ ಸ್ನಾನ ಮಾಡುಸುತ್ತಿದ್ದರು.

ಆಗೊಂದು ದಿನ ಬಾಗಿ ಅಜ್ಜಾ ತೊಡಲಿದರು– "ನನ್ ಹತ್ರ ರೊಕ್ಕಾ ಇಲ್ಲ. ಇದ್ದಿದ್ರ ಅಕೀಗೊಂದು ಸೀರಿ ಕೊಡಸ್ತಿದ್ದೆ.

ಕೂಡಲೇ ಮಗ ಅಶೋಕ್ ಹೇಳಿದರು– "ರೊಕ್ಕ ನನ್‌ಹತ್ರ ಅದs . ಸೀರಿ ನಾ ತಂದ್ ಕೊಡತೀನಿ"

ಆ ತಂದೆ ಕೇವಲ ನಕ್ಕರಷ್ಟೆ. ಅವರ ಮಾತಿನ ಹಿಂದೆ ಅದಾವ ಮುದವಿತ್ತೊ, ಅದೆಂಥ ಒಲವಿತ್ತೋ ಯಾರು ಬಲ್ಲರು?

ಮುಂದೆ ಕೆಲವೇ ದಿನ ...

ಅಂದು, ೧೯೭೮ರ ಅಕ್ಟೋಬರ್ ೨೨. ಬೆಳಗಿನಿಂದಲೇ ಬಾಗಿ ಅಜ್ಜಾ ಅವರ ದೇಹಸ್ಥಿತಿ ತುಂಬ ಸೂಕ್ಷ್ಮವಾಗಿತ್ತು. ಉಸಿರಾಟವೂ ನಿಧಾನವಾಗುತ್ತಿತ್ತು. ಕಾಲುಗಳು ತಣ್ಣಗಾಗುತ್ತಿದ್ದವು. ಇಹಲೋಕದ ಪ್ರಜ್ಞೆ ಬಹಳ ಮಟ್ಟಿಗೆ ದೂರವಾಗಿತ್ತು. ಕುಟುಂಬದ ಸದಸ್ಯರೆಲ್ಲರಿಗೂ ತಮ್ಮ ಪ್ರೀತಿಯ ಜೀವ ತಮ್ಮಿಂದ ಅಗಲುವುದು ಖಚಿತವಾಗಿತ್ತು.

ಗಂಟೆ ಬೆಳಗಿನ ಒಂಭತ್ತನ್ನು ಸಮಿಸಿತು.

ಉಸಿರಾಟ ತುಂಬ ಮಂದವಾಯಿತು.

ನಾಡಿ ಕ್ಷೀಣವಾಯಿತು. ಎದೆಬಡಿತ ಇಲ್ಲವೇ ಇಲ್ಲವೇನೋ ಎಂಬಷ್ಟು ದುರ್ಬಲ.

ಸುತ್ತಲಿದ್ದ ಎಲ್ಲರೂ ಗಟ್ಟಿಯಾಗಿ 'ಭಕ್ತಾಮರ ಸ್ತೋತ್ರ'ವನ್ನು ಹೇಳಲಾರಂಭಿಸಿದರು. ಮಾನತುಂಗಾಚಾರ್ಯರಿಂದ ಸಹಸ್ರವರ್ಷಗಳ ಹಿಂದೆ ರಚಿತವಾದ ನಲವತ್ತೆಂಟು ಚರಣಗಳ ಆ ಶ್ಲೋಕಮಾಲಿಕೆಯುದ್ಧಕ್ಕೂ ವೀತರಾಗ ಭಗವಂತನನ್ನು ಸ್ತುತಿಸಲಾಗಿದೆ. ಆ ಸ್ತೋತ್ರದ ಪಠಣದಿಂದ ಎಂಥ ಕಷ್ಟಗಳೂ ನಿವಾರಣೆಯಾಗಿತ್ತವೆ, ಎಲ್ಲ ಪಾಪಗಳೂ ಕ್ಷಯಿಸುತ್ತವೆ ಎಂಬ ನಂಬಿಕೆ ಜೈನರಲ್ಲಿ ಮನೆ ಮಾಡಿದೆ.

ಪತ್ನಿ, ಸೊಸೆಯಂದಿರು, ಮಕ್ಕಳು, ಮೊಮ್ಮಕ್ಕಳು – ಎಲ್ಲರೂ ಈ ಭಕ್ತಾಮರ ಸ್ತೋತ್ರವನ್ನು ಉದ್ಘೋಷಿಸುತ್ತಾ ಈ ಪುಣ್ಯ ಜೀವಕ್ಕೆ ಶ್ರದ್ಧಾಭಕ್ತಿ ಪೂರ್ವಕ ವಿದಾಯವನ್ನು ಹಾರೈಸತೊಡಗಿದರು.

ಭಕ್ತಾಮರಪ್ರಣತಮೌಲಿಮಣಿಪ್ರಭಾಣಾ
ಮುದ್ಯೋತಕಂ ದಲಿತಪಪ ತಮೋವಿತಾನಂ
ಸಮ್ಯಕ್ ಪ್ರಣಮ್ಯ ಜಿನಪಾದಯುಗಂ ಯುಗಾದಾ
ವಾಲಂಬನಂ ಭವಜಲೇ ಪತತಾಂ ಜನಾನಾಂ ||

'ಭಕ್ತರಾದಂಥ ದೇವತೆಗಳು ಯಾವ ಜಿನೇಶ್ವರನಿಗೆ ನಮಸ್ಕರಿಸಿದಾಗ ಆ ದೇವತೆಗಳ ಕಿರೀಟಗಳ ಮಣಿ ಪ್ರಭೆಯಿಂದ ಯಾರ ಪಾದಗಳ ಕಾಂತಿ ಮತ್ತಷ್ಟು ಉದ್ದೀಪನಗೊಳ್ಳುವುದೋ, ಯಾರ ಪಾದಯುಗ್ಮಗಳೇ ಪಾಪವೆಂಬ ಕತ್ತಲೆಯ ರಾಶಿಯನ್ನು ನಾಶಗೊಳಿಸುವುದೋ, ಯುಗದ ಆದಿಯಿಂದಲೂ ಸಂಸಾರ ಕೂಪದಲ್ಲಿ ಬಿದ್ದ ಜನರನ್ನು ಹಿಡಿದು ಮೇಲೆತ್ತುವುದೋ, ಅಂಥ ಜಿನ ಪಾದಗಳನ್ನು ನಾನು ನಮಸ್ಕರಿಸಿ ಸ್ತುತಿಸುತ್ತೇನೆ'.

ಯಸ್ಸಂಸ್ತುತ ಸಕಲವಾಙ್ಮಯ ತತ್ತ್ವಬೋಧಾ

ದುದ್ಭೂತಬುದ್ಧಿಪಟುಭಿಃ ಸುರಲೋಕನಾಥೈಃ ||
ಸ್ತೋತ್ರೈಃ ಜಗತ್ತ್ರಿತಯಚಿತ್ತಹರೈರುದಾರೈಃ
ಸ್ತೋಷ್ಯೇಕಿಲಾಹಮಪಿತಂ ಪ್ರಥಮಂ ಜಿನೇಂದ್ರಂ ||

–"ಎಲ್ಲ ಶಾಸ್ತ್ರಗಳ ಜ್ಞಾನವನ್ನೂ ಹೊಂದಿರುವ ಬುದ್ಧಿಯವರಾದ ಸಮರ್ಥರಾದ ಇಂದ್ರಾದಿ ದೇವತೆಗಳು ಯಾವ ವೃಷಭಸ್ವಾಮಿಯನ್ನು ಮೂರು ಲೋಕಗಳ ಮನಸ್ಸನ್ನೂ ಆಕರ್ಷಿಸುವ ಪ್ರಶಸ್ತವಾದ ಸ್ತೋತ್ರಗಳಿಂದ ಸ್ತುತಿಸುತ್ತಾರೋ, ಅಂತಹ ಪ್ರಥಮ ಜಿನೇಂದ್ರನನ್ನು ಅಲ್ಪಜ್ಞನಾದ ನಾನೂ ಕೂಡ (ನನಗೆ ತಿಳಿದಂತೆ) ಸ್ತುತಿಸುತ್ತೇನೆ.'

. . . ಸುತ್ತಲಿದ್ದವರ ಕಣ್ಣಾಲಿಗಳ ತುಂಬ ಅಶ್ರುಧಾರೆ ಹರಿಯುತ್ತಿದ್ದಂತೆ ಭಕ್ತಾಮರ ಸ್ತೋತ್ರ ತಾನೇತಾನಾಗಿ ಅವರ ಬಾಯಿಂದ ಹೊರಬರುತ್ತಿದ್ದವು. ದೀರ್ಘಕಾಲ ಬೆಳಗಿದ ದೀಪಶಾಂತವಾಗುತ್ತಿತ್ತು. ಅದರಲ್ಲಿ ಗಾಳಿಯ ಹೊಡೆತಕ್ಕೆ ಸಿಕ್ಕ ಹೋಯ್ದಾಟವಿರಲಿಲ್ಲ. ಬದಲಾಗಿ, ಎಣ್ಣೆ ತೀರಿದಾಗ ತನ್ನಷ್ಟಕ್ಕೆ ನಂದಿ ಹೋಗುವ ನಿಷ್ಟಂದತೆಯಿತ್ತು. ಉಸಿರೆಂಬ ಗರಗಸದಿಂದ ದೇಹಾತ್ಮರ ಬೆಸುಗೆಯನ್ನು ನಿತ್ಯವೂ ಆಂತರಿಕವಾಗಿ ಬಿಡಿಸಿ ನೋಡುತ್ತಿದ್ದ ಜೀವ ಈಗ, ಪಾತ್ರಧಾರಿಯು ನಾಟಕ ಮುಗಿದ ಬಳಿಕ ವೇಷವನ್ನು ಕಳಚಿ ಒಗೆಯುವಂತೆ ಉಸಿರು ಮತ್ತು ದೇಹಗಳೆರಡನ್ನೂ ಅಂತಿಮವಾಗಿ ಇಲ್ಲಿಯೇ ಒಗೆದು ನಡೆವ ತಿರುವಿನಲ್ಲಿತ್ತು.

ಮುಂಜಾನೆ ೯.೨೦

ಪ್ರೊ. ಬಾಗಿ, ಎಲ್ಲರ ಪ್ರೀತಿಯ ಬಾಗಿ ಅಜ್ಜಾ–ಬಿಟ್ಟ ಉಸಿರನ್ನು ಪುನಃ ಒಳಗೆಳೆದುಕೊಳ್ಳಲಿಲ್ಲ. ಮೃಣ್ಮಯ ದೇಹವನ್ನು ಸಚೇತನಗೊಳಿಸಿ ಇಷ್ಟೂಕಾಲ 'ಬದುಕೆಂದರೆ ಹೇಗಿರಬೇಕು?' ಎಂಬುದನ್ನು ತನ್ನ ಪರಿಸರಕ್ಕೆ ತೋರಿಸಿಕೊಟ್ಟಿದ್ದ ಆತ್ಮ ಅಂತಿಮವಾಗಿ ಆ ಕ್ಷಣದಲ್ಲಿ ಆ ದೇಹವೆಂಬ ಉಪಕರಣವನ್ನು ಅಲ್ಲಿಯೇ ಬಿಟ್ಟು ಅದೃಶ್ಯವಾಗಿ ಅಮೂರ್ತವಾಗಿ ಊರ್ಧ್ವಗಾಮಿಯಾಗಿ ನಿರ್ಗಮಿಸಿತ್ತು.

ಎಲ್ಲರೂ ರೋದಿಸಿದರು. ಆದರೆ ಅದರಲ್ಲು ಒಂದು ಆತ್ಮ ಸಂಯಮವಿತ್ತು. ಅದು ಅಷ್ಟೂ ವರ್ಷಗಳು ಅವರು ಪಡೆದುಕೊಂಡಿದ್ದ ಸಂಸ್ಕಾರದ ಫಲ.

ಸುದ್ದಿ ತಿಳಿದವರೆಲ್ಲ ಬಂದರು. ಅವರ ಮಾಜಿ ವಿದ್ಯಾರ್ಥಿಗಳು, ನೆರೆಹೊರೆಯವರು, ವಿಶ್ವವಿದ್ಯಾಲಯವದವರು, ಕರ್ನಾಟಕ ಕಾಲೇಜಿನ ಅಧ್ಯಾಪಕರು...ಇತ್ಯಾದಿ ಇತ್ಯಾದಿ. ಎಲ್ಲರೂ ಹಾರಹಾಕಿ ಈ ಭೀಷ್ಮಗುರುವಿಗೆ ನಮಿಸಿ ಗೌರವ ಸಲ್ಲಿಸಿದರು. ಕೆಲವು ವರ್ಷಗಳ ಹಿಂದಿನಿಂದ ಕ್ರಮೇಣ ಜೀರ್ಣವಾಗುತ್ತಾ ಬಂದಿದ್ದ, ಹಾಸಿಗೆ ಹಿಡಿದಿದ್ದ ಅವರ ಸ್ಥಿತಿಯನ್ನು ಕಂಡಿದ್ದವರಿಗೆ–'ಈ ಮರಣವೇ ಅವರಿಗೆ ನಿಜವಾದ ಸುಖವನ್ನೊದಗಿಸಿತು'– ಎನ್ನಿಸಿದ್ದು ಸರಿಯೇ ಆಗಿತ್ತು. ಆದರೂ 'ಒಂದು ದೊಡ್ಡ ಜೀವ ಹೋಯಿತು' ಎಂಬ ವಿಷಾದದ ನಿಟ್ಟುಸಿರು ಇಡೀ ಧಾರವಾಡದ ಬೌದ್ಧಿಕ ವಲಯದಲ್ಲಿ ವ್ಯಾಪಿಸಿಕೊಂಡಿತು.

ಶವಸಂಸ್ಕಾರಕ್ಕಾಗಿ ಮೆರವಣಿಗೆಯಲ್ಲಿ ಕೊಂಡೊಯ್ಯುತ್ತಿದ್ದ ಅವರ ಪಾರ್ಥಿವ ಶರೀರವನ್ನು ಅವರ ಪ್ರೀತಿಯ ಸನ್ಮತಿ ಹಾಸ್ಟೆಲ್ಲಿನ ಮುಂದೆ ಕೆಲ ನಿಮಿಷಗಳ ಕಾಲ ಇರಿಸಲಾಗಿತ್ತು.

ಮುಂದೆ, ಧಾರ್ಮಿಕ ಪದ್ಧತಿಗಳಿಗನುಗುಣವಾಗಿ ಅಂತಿಮ ಸಂಸ್ಕಾರಗಳೆಲ್ಲ ನಡೆದವು.

ಅನಂತರ ಅಕ್ಷರಶಃ ವಿರಾಗಿಣಿಯಂತೆ ಬದುಕಿನ ಕುಸುಮಕ್ಕೆ ೧೯೮೪ ರಲ್ಲಿ ತೀರಿಕೊಂಡರು.

.....

ಇಪ್ಪತ್ಮೂರು ವರ್ಷಗಳು ಉರುಳಿವೆ.

ಪ್ರೊ. ಬಾಗಿಯವರು ತಾವು ಕಟ್ಟಿದ ಆ ವಿಶಾಲವಾದ ಮನೆಯಲ್ಲಿ ಇನ್ನೂ ಸಚೇತನರಗಿದ್ದಾರೆನ್ನಿಸುತ್ತದೆ. ಅವರ ಮಕ್ಕಳು, ಸೊಸೆಯಂದಿರು, ಅವರ ಮಕ್ಕಳು ಮೊಮ್ಮಕ್ಕಳು ಆ ಮನೆಯಲ್ಲಿ ಈಗ ಸಂತೋಷ ಸಂತೃಪ್ತಿಗಳಿಂದ ನಲಿಯುತ್ತಿದ್ದಾರೆ. ಅಲ್ಲಿ ಧನಧಾನ್ಯ ಸಮೃದ್ಧಿಯಿದೆ. ಆ ದಿನಗಳಿಗೂ ಇಂದಿಗೂ ಆ ಮನೆಯಲ್ಲಿ ಹೆಚ್ಚಿನ ಮಾರ್ಪಾಟುಗಳೇನೂ ಆಗಿಲ್ಲ. ಪ್ರೊ. ಬಾಗಿದಂಪತಿಗಳು ನೆಟ್ಟು ನೀರೆರೆದು ಬೆಳೆಸಿದ್ದ ಕೆಲವು ಮಾವಿನ ಮರಗಳು ಇನ್ನೂ ಇವೆ. ಐಷಾರಾಮವನ್ನು ತೋರ್ಪಡಿಸುವ ಯಾವ ವಸ್ತುವಿನ ಅಗತ್ಯವೂ ಪ್ರೊ. ಬಾಗಿಯವರ ಸತ್ಸಂತನಕ್ಕೆ ಇನ್ನೂ ಕಂಡುಬಂದಿಲ್ಲ. ಕಾಲದ ಹೊಸ ಆವಿಷ್ಕಾರಗಳಾದ ಟಿ.ವಿ. ಫ್ರಿಜ್, ಕಂಪ್ಯೂಟರ್‌ಗಳು ಈ ಮನೆಯನ್ನು ಪ್ರವೇಶಿಸಿವೆ. ಆದರೆ ಅಲ್ಲಿನವರು ಇವನ್ನು ಆಳುತ್ತಿದ್ದಾರೆಯೇ ವಿನಃ ಈ ವಸ್ತುಗಳು ಮನೆಯನ್ನು ಆಳುತ್ತಿಲ್ಲ. ಮನೆಯಲ್ಲಿನ ಎಳೆಯರೂ ತಮ್ಮ ವಿದ್ಯಾಭ್ಯಾಸದಲ್ಲಿ ಗಂಭೀರವಾಗಿದ್ದಾರೆ.

ಪ್ರೊ. ಬಾಗಿಯವರು ಕಚ್ಚೆಪಂಚೆಯುಟ್ಟು ಕ್ಲೋಸ್‌ಕಾಲರ್ ಕೋಟು ಧರಿಸಿ ತಲೆಗೆ ಕರಿಟೊಪ್ಪಿಗೆಯನ್ನಿಟ್ಟು ಕುರ್ಚಿಯ ಮೇಲೆ ಕುಳಿತು ನಿಷ್ಕಲ್ಮಷವಾದ ನಗೆ ನಗುತ್ತಿದ್ದಾರೆ– ಈ ಮನೆಯ ಹಜಾರದ ಗೋಡೆಯ ಮೇಲೆ.

ಇನ್ನೊಂದಡೆ– ಕುಸುಮಕ್ಕನ ದೊಡ್ಡಚಿತ್ರವಿದೆ.

ಈ ಮನೆಗೆ ಪ್ರೊ. ಬಾಗಿ ದಂಪತಿಗಳ ಪುಣ್ಯದ ಬಲವಿದೆ. ಸಚ್ಚಾರಿತ್ರ್ಯದ ಬುನಾದಿಯಿದೆ.

ಗತಿಸಿದ ಬಾಗಿ ಅಜ್ಜಾ ಅವರ ನೆನಪು, ಮಾರ್ಗಗಳು ಈಗಲೂ ಗೃಹವಾಸಿಗಳನ್ನು ಮಲ್ಲಿಗೆಯ ಮಧುರಕರ ಕಂಪಿನಂತೆ ಆವರಿಸಿವೆ. 'ಅದು ಸನ್ಮಾರ್ಗ'–ಎಂಬ ಸ್ಪಷ್ಟ ತಿಳಿವಳಿಕೆಯಿದೆ. ಧರ್ಮಾಚರಣೆ, ಸಮಾಜಸೇವೆಗಳು ಹಾಗೆಯೇ ಮುಂದುವರೆದಿವೆ. ರತ್ನಾಕರ ವರ್ಣಿ 'ಭರತೇಶ ವೈಭವ'ದಲ್ಲಿ ಒಂದೆಡೆ ಹೇಳುವಂತೆ–

ಧರ್ಮದಿಂದಾದುದು ಸಿರಿಯೆಂದು ಸುಖಿಸುತ್ತ
ಧರ್ಮವ ಮರೆಯರುತ್ತಮರು
ಧರ್ಮವೇತರದೆಂದು ಭೋಗಕ್ಕೆ ಮರುಳಾಗಿ
ಕರ್ಮಿಗಳಾಚರಿಸುವರು !

ಪ್ರೊ. ಬಿ. ಬಿ. ಬಾಗಿಯವರದ್ದು ಮೌನದುಡಿಮೆಯಾಗಿತ್ತು. ಕೆಲಸ ಸಮರ್ಪಕವಾಗಿ ಸರಿಯಾಗಿ ಆಗುವುದು ಅವರಿಗೆ ಮುಖ್ಯವಗಿತ್ತು. ಕೀರ್ತಿ ಎಂಬುದು ಇವರ ಅದ್ಯತೆಗಳ ಪಟ್ಟಿಯಲ್ಲಿ ಎಂದೂ ಇರಲೇ ಇಲ್ಲ. ಮೊಗ್ಗು ಬಿರಿದರಳಿ ಕಂಪು ಬೀರಿದ ಹಾಗೆ ಅ ಬದುಕು ಅರಳಿತು. 'ಮೂರು ದಿನಗಳ ಬಾಳು ಮಘಮಘಿಸುತಿರಲಿ', ಎಂಬ ಕವಿವಾಣಿ ಅವರ ಜೀವನ ಸೂತ್ರದಂತಿತ್ತು. ಡಿ.ವಿ.ಜಿ.ಯವರ ಬೋಧೆಯಿಂದು ಸಹಜವಾಗಿ ಅಳವಟ್ಟಿತ್ತು ಅವರ ಬದುಕಿನಲ್ಲಿ–

ಇಳೆಯಿಂದ ಮೊಳಕೆಯೊಗೆವಂದು ತಮಟೆಗಳಿಲ್ಲ
ಫಲ ಮಾಗುವಂದು ತುತ್ತೂರಿ ದನಿಯಿಲ್ಲ
ಬೆಳಕೀವ ಸೂರ್ಯಚಂದ್ರರದೊಂದು ಸದ್ದಿಲ್ಲ
ಹೊಲಿ ನಿನ್ನ ತುಟಿಗಳನು–ಮಂಕುತಿಮ್ಮ

ಪ್ರೊ. ಬಾಗಿಯವರು ಮೌನವಾಗಿಯೇ ಕೆಲಸಮಾಡಿದರೂ, ಸಾಮಾನ್ಯರಂತಯೇ ಬದುಕಿದರೂ ಅನೇಕರಿಗೆ ಜೀವನಸ್ಫೂರ್ತಿ ನೀಡಿದ ಬದುಕಾಯಿತು ಅವರದ್ದು. ಡಾ. ಮಹಾವೀರ ಲಗಾರೆ ಹೇಳುವಂತೆ–

"ನಮ್ಮ ಜೀವನ ರೂಪುಗೊಳ್ಳುವ ವಯಸ್ಸಿನಲ್ಲಿ ನಾವು ಬಾಗೀ ಅಜ್ಜಾ ಮತ್ತು ಅಜ್ಜಿ ಅವರ ಪ್ರೀತಿ ಮತ್ತು ಮಾರ್ಗದರ್ಶನಗಳ ನೆರಳಲ್ಲಿ ಬೆಳೆದೆವು. ಆ ದಿನಗಳ ನೆನಪುಗಳು ನಮ್ಮ ಜೀವನದುದ್ದಕೂ ಹಸಿರಾಗಿ ಉಳಿದಿದ್ದು ಸಾರ್ಥಕ ಜೀವನಕ್ಕೆ ಸ್ಫೂರ್ತಿಯಾಗಿವೆ."

–ಇಂಥ ಭಾವನೆಯನ್ನು ಹೃದಯದಲ್ಲಿಟ್ಟುಕೊಂಡಿರುವ ಸಹಸ್ರಾರು ಜನ ಕರ್ನಾಟಕದ ಒಳಗೆ, ಹೊರಗೆ ಅಷ್ಟೇ ಅಲ್ಲ, ವಿದೇಶಗಳಲ್ಲೂ, ಇದ್ದಾರೆ.

ನಮ್ಮ ಉದಯೋನ್ಮುಖ ಕವಯಿತ್ರಿ ಎಚ್. ಎನ್. ಆರತಿಯವರ ಕವಿತೆಯೊಂದರ ಕೊನೆಯ ಸಾಲುಗಳು ಹೀಗಿವೆ–

"ದೀಪ ಅರಿದ ಮೇಲೂ
ಮತ್ತಾವುದೋ ಬೆಳಕು...'

ಪ್ರೊ. ಬಾಗಿಯವರನ್ನು ಬಲ್ಲ ಎಲ್ಲರ ಹೃದಯದ ಸ್ಥಿತಿ ಇದೇ ಆಗಿದೆ. ಆ ಪುಣ್ಯಪುರುಷನ ಜೀವಜ್ಯೋತಿ ಅದೃಶ್ಯವಾಗಿ ಹತ್ತಿರ ಹತ್ತಿರ ಕಾಲು ಶತಮಾನವಾಗಿದೆ. ಅದರೂ ಈ ಎಲ್ಲರ ಹೃದಯಗಳಲ್ಲಿ ಅದು ಬೆಳಕು ಬೀರುತ್ತಿದೆ. ಆ ಬೆಳಕನ್ನು ಅವರುಗಳು ಮತ್ತೆಷ್ಟೋ ಜನರಿಗೆ ಹರಡಿದ್ದಾರೆ.

ಬದುಕಿದರೆ ಹಾಗೆ ಬದುಕಬೇಕು.

ಪ್ರೊ. ಬಿ.ಬಿ. ಬಾಗಿ ವಂಶವೃಕ್ಷ (ಅವರ ತಂದೆಯವರ ಕಾಲದಿಂದ)



ಪ್ರೊ. ಬಿ. ಬಿ. ಬಾಗಿಯವರ ಜೀವನದ ಮುಖ್ಯ ಘಟನೆಗಳು

೧೮.೯.೧೯೯೪ – ಜನನ

೧೯೧೫–೧೬ – ವಿವಾಹ

೧೬೨೦ – ಬಿ. ಎ. ಪದವಿ, ಉಪನ್ಯಾಸಕ ವೃತ್ತಿ ಆರಂಭ, ಸಂಸಾರದ ಆರಂಭ.

೨೧.೧೨.೧೯೨೨ – ಮೊದಲ ಮಗು ಅಜಿತನ ಜನನ.

೧೯೨೭ – **Higher Algebra & Trigonometry** ಪ್ರಕಟಣೆ

೨೧.೪.೧೯೨೮ – ಮಗಳು ಸುಧಾಳ ಜನನ

೧೯೩೧ – ಮೊದಲ ಗ್ರಂಥ **'Plane Trigonometry'** ಪ್ರಕಟಣೆ

೨೪.೧.೧೯೩೪ – ಕೊನೆಯ ಮಗು ಅಶೋಕನ ಜನನ.

೧೯೩೪. – ಸ್ವಂತ ಮನೆ ಕಾಟ್ಟಿಸಿದ್ದು

೧೯೩೬ – ಮೂರನೇ ಕೃತಿ **Analytical Geometry of Conic sections** ಪ್ರಕಟನೆ

೧೯೪೧. – ನಾಲ್ಕನೆಯ ಪುಸ್ತಕ **First Course in Algebraic Geometry** ಪ್ರಕಟಣೆ

೧೯೪೨–೪೭ – ಹೊಲಕೊಂಡದ್ದು

೧೯೪೯ – ಕರ್ನಾಟಕ ಕಾಲೇಜಿನ ಪ್ರೊಫೆಸರ್ ಹುದ್ದೆಯಿಂದ ನಿವೃತ್ತಿ, ಕರ್ನಾಟಕ ವಿ. ವಿ.ಸೆನೆಟ್ ಸದಸ್ಯತ್ವ.

೨೧.೫.೧೯೫೦	–	ಮೊದಲ ಮಗ ಅಜಿತ್‌ರ ಮದುವೆ.
೧೯೫೧	–	ಮಗಳು ಸುಧಾ ಮದುವೆ
೧೯೫೨	–	ಸಮ್ಮೇದ ಶಿಖರ್ಜಿ ಯಾತ್ರೆ
೧೯೫೪	–	ಕ. ವಿ. ವಿ. ಸ್ನಾತಕೋತ್ತರ ಗಣಿತ ವಿಭಾಗದ ಮುಖ್ಯಸ್ಥ.
೧೦.೫.೧೯೫೯	–	ಕೊನೆಯ ಮಗ ಅಶೋಕ್‌ರ ಮದುವೆ
೧೯೬೧	–	ಧಾರವಾಡದ ಗಾಂಧಿ ಪ್ರತಿಷ್ಠಾನದಿಂದ ಸನ್ಮಾನ
೧೯೬೨	–	ಧರ್ಮಸ್ಥಳದಲ್ಲಿ ಸನ್ಮಾನ– ಶ್ರೀ ರತ್ನವರ್ಮ ಹೆಗ್ಗಡೆ ಅವರಿಂದ
೧೯೬೪	–	ಅಧ್ಯಕ್ಷ, ದಕ್ಷಿಣ ಭಾರತ ಜೈನ ಮಹಾಸಭಾ, ಸಾಂಗ್ಲಿ
೧೯೬೫	–	ಧಾರವಾಡದಲ್ಲಿ ಸನ್ಮತಿ ವಿದ್ಯಾರ್ಥಿ ನಿಲಯ ಆರಂಭ
೧೯೭೦	–	'ಅಂಕಗಣಿತದ ಮೂಲತತ್ವಗಳು' ಪ್ರಕಟಣೆ.
೧೯೭೩	–	ಮರೆವಿನ ಆರಂಭ, ಕ್ರಮೇಣ ಉಲ್ಬಣ
ಮೇ ೧೯೭೮	–	ಖಾಹಿಲೆಯ ತೀವ್ರತೆ
೨೨.೧೦.೧೯೭೮	–	ದೇಹತ್ಯಾಗ
೪.೬.೧೯೮೪	–	(ಶ್ರುತಪಂಚಮಿ) ಪತ್ನಿ ಕುಸುಮಾವತಿ ಅವರ ದೇಹತ್ಯಾಗ